# ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001

16.11.2009ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 41ನೇ ಸಂಪುಟದ 1ನೇ ಸಂಚಿಕೆಯಲ್ಲಿ 28 ರಿಂದ 48ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ - II
### ನ್ಯಾಯವಾದಿಗಳ ಕಲ್ಯಾಣ ನಿಧಿಯ ಸ್ಥಾಪನೆ

3. ನ್ಯಾಯವಾದಿಗಳ ಕಲ್ಯಾಣ ನಿಧಿ

### ಅಧ್ಯಾಯ – III
### ಟ್ರಸ್ಟೀ ಸಮಿತಿಯ ಸ್ಥಾಪನೆ

4. ಟ್ರಸ್ಟೀ ಸಮಿತಿಯ ಸ್ಥಾಪನೆ
5. ಟ್ರಸ್ಟೀ ಸಮಿತಿಯ ಅಧ್ಯಕ್ಷನ ಅಥವಾ ಸದಸ್ಯನ ಅನರ್ಹತೆಗಳು ಮತ್ತು ಅವರನ್ನು ತೆಗೆದುಹಾಕವುದು
6. ಟ್ರಸ್ಟೀ ಸಮಿತಿಯ ನಾಮನಿರ್ದೇಶಿತ ಅಧ್ಯಕ್ಷ ಮತ್ತು ಸದಸ್ಯರ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿಮಾಡುವುದು
7. ಖಾಲಿಸ್ಥಾನಗಳು, ಇತ್ಯಾದಿಗಳು ಟ್ರಸ್ಟೀ ಸಮಿತಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ
8. ಟ್ರಸ್ಟೀ ಸಮಿತಿಯ ಸಭೆಗಳು
9. ಟ್ರಸ್ಟೀ ಸಮಿತಿಯ ನಾಮನಿರ್ದೇಶಿತ ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಪ್ರಯಾಣ ಮತ್ತು ದಿನಭತ್ಯೆಗಳು
10. ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ
11. ಟ್ರಸ್ಟೀ ಸಮಿತಿಯ ಪ್ರಕಾರ್ಯಗಳು
12. ಸಾಲ ತೆಗೆದುಕೊಳ್ಳುವುದು ಮತ್ತು ಹೂಡಿಕೆ
13. ಲೆಕ್ಕಪತ್ರಗಳೂ ಮತ್ತು ಲೆಕ್ಕಪರಿಶೋಧನೆ
14. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು
15. ರಾಜ್ಯ ಬಾರ್ ಕೌನ್ಸಿಲ್ ಕೆಲವು ಮೊತ್ತಗಳನ್ನು ನಿಧಿಗೆ ಸಂದಾಯ ಮಾಡುವುದು

### ಅಧ್ಯಾಯ – IV
### ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್ನಿನ ಮಾನ್ಯತೆ

16. ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್‌ಗೆ ರಾಜ್ಯ ಬಾರ್ ಕೌನ್ಸಿಲಿನಿಂದ ಮಾನ್ಯತೆ
17. ರಾಜ್ಯ ಬಾರ್ ಅಸೋಸಿಯೇಷನ್‌ಗಳ ಹಾಗೂ ರಾಜ್ಯ ನ್ಯಾಯವಾದಿ ಅಸೋಸಿಯೇಷನ್‌ಗಳ ಕರ್ತವ್ಯಗಳು

## ಅಧ್ಯಾಯ – V

### ನ್ಯಾಯವಾದಿಗಳ ಕಲ್ಯಾಣ ನಿಧಿಯ ಸದಸ್ಯತ್ವ ಮತ್ತು ಆ ನಿಧಿಯಿಂದ ಮಾಡಬೇಕಾದ ಸಂದಾಯ

18. ನಿಧಿಯ ಸದಸ್ಯತ್ವ
19. ನಿಧಿಯ ಸದಸ್ಯನಿಗೆ ಅನುಗ್ರಹಪೂರ್ವಕ ಅನುದಾನ
20. ಪುನರವಲೋಕನ
21. ವೃತ್ತಿ ಸಮಾಪ್ತಿಯ ನಂತರ ಮೊಬಲಗಿನ ಸಂದಾಯ
22. ನಿಧಿಯಲ್ಲಿ ಸದಸ್ಯನಿಗಿರುವ ಹಿತಾಸಕ್ತಿಯ ಪರಭಾರೆ, ಜಪ್ತಿ ಇತ್ಯಾದಿಯ ಮೇಲೆ ನಿರ್ಬಂಧ
23. ಆದಾಯ ತೆರಿಗೆಯಿಂದ ವಿನಾಯಿತಿ
24. ನಿಧಿಯ ಸದಸ್ಯರಿಗೆ ಸಮೂಹ ಜೀವವಿಮೆ ಮತ್ತು ಇತರ ಪ್ರಯೋಜನಗಳು
25. ಟ್ರಸ್ಟೀ ಸಮಿತಿಯ ತೀರ್ಮಾನದ ಅಥವಾ ಆದೇಶದ ವಿರುದ್ಧ ಅಪೀಲು

## ಅಧ್ಯಾಯ – VI

### ಸ್ಟಾಂಪುಗಳ ಮುದ್ರಣ, ಹಂಚಿಕೆ ಮತ್ತು ರದ್ದಿಯಾತಿ

26. ರಾಜ್ಯ ಬಾರ್ ಕೌನ್ಸಿಲಿನಿಂದ ನ್ಯಾಯವಾದಿಗಳ ಕಲ್ಯಾಣ ನಿಧಿಯ ಸ್ಟಾಂಪುಗಳ ಮುದ್ರಣ ಮತ್ತು ವಿತರಣೆ
27. ವಕಾಲತ್‌ನಾಮೆಗೆ ಸ್ಟಾಂಪುಗಳನ್ನು ಅಂಟಿಸುವುದು

## ಅಧ್ಯಾಯ – VII

### ಸಂಕೀರ್ಣ

28. ಕೆಲವು ವ್ಯಕ್ತಿಗಳು ಪ್ರಯೋಜನಗಳಿಗೆ ಅರ್ಹರಾಗಿರತಕ್ಕದ್ದಲ್ಲ
29. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ
30. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ
31. ಸಾಕ್ಷಿದಾರರನ್ನು ಕರೆಸಲು ಮತ್ತು ಸಾಕ್ಷ್ಯವನ್ನು ತೆಗೆದುಕೊಳ್ಳಲು ಅಧಿಕಾರ
32. ಅನುಸೂಚಿ I ಮತ್ತು II ನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರ
33. ನಿರ್ದೇಶನಗಳನ್ನು ನೀಡಲು ಸಮುಚಿತ ಸರ್ಕಾರದ ಅಧಿಕಾರ
34. ಟ್ರಸ್ಟೀ ಸಮಿತಿಯನ್ನು ರದ್ದುಗೊಳಿಸಲು ಸಮುಚಿತ ಸರ್ಕಾರಕ್ಕೆ ಅಧಿಕಾರ
35. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ
36. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
37. ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲದ ಮುಂದೆಇಡತಕ್ಕದ್ದು
38. ಉಳಿಸುವಿಕೆ

**ಅನುಸೂಚಿಗಳು**

# ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001

**(2001ರ ಅಧಿನಿಯಮ ಸಂಖ್ಯೆ 45)**

**[14ನೇ ಸೆಪ್ಟೆಂಬರ್, 2001]**

ನ್ಯಾಯವಾದಿಗಳ ಪ್ರಯೋಜನಕ್ಕಾಗಿ ಕಲ್ಯಾಣ ನಿಧಿಯೊಂದನ್ನು ಸ್ಥಾಪಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ ದಿನಾಂಕದಂದು ಜಾರಿಗೆ ಬರತಕ್ಕದ್ದು; ಮತ್ತು *ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಮತ್ತು ಬೇರೆ ಬೇರೆ ರಾಜ್ಯಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು, ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಅಂತಹ ಉಪಬಂಧದಲ್ಲಿನ ಯಾವುದೇ ಉಲ್ಲೇಖವನ್ನು ಯಾವುದೇ ರಾಜ್ಯಕ್ಕೆ ಸಂಬಂಧಿಸಿದಂತೆ ಆ ರಾಜ್ಯದಲ್ಲಿ ಆ ಉಪಬಂಧವು ಜಾರಿಗೆ ಬರುವ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.**– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) **"ನ್ಯಾಯವಾದಿ"** ಎಂದರೆ ನ್ಯಾಯವಾದಿಗಳ ಅಧಿನಿಯಮ, 1961ರ 17ನೇ ಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ಸಿದ್ಧಪಡಿಸಿದ ಮತ್ತು ನಿರ್ವಹಿಸಿಕೊಂಡು ಬಂದ ಆ ರಾಜ್ಯದ ಪಟ್ಟಿಯಲ್ಲಿ ಯಾವ ನ್ಯಾಯವಾದಿಯ ಹೆಸರು ನಮೂದಿತವಾಗಿದೆಯೋ ಮತ್ತು ಯಾರು ರಾಜ್ಯ ಬಾರ್ ಅಸೋಸಿಯೇಷನ್ನಿನ ಅಥವಾ ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್ನಿನ ಸದಸ್ಯನಾಗಿರುವನೋ ಆ ನ್ಯಾಯವಾದಿ ಎಂದು ಅರ್ಥ;

(ಬಿ) **"ಸಮುಚಿತ ಸರ್ಕಾರ"** ಎಂದರೆ,–

(i) ಒಂದು ರಾಜ್ಯದ ಬಾರ್ ಕೌನ್ಸಿಲಿನ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ನ್ಯಾಯವಾದಿಗಳ ಸಂದರ್ಭದಲ್ಲಿ, ಆ ರಾಜ್ಯ ಸರ್ಕಾರ ಎಂದು ಅರ್ಥ;

(ii) ಒಕ್ಕೂಟ ರಾಜ್ಯಕ್ಷೇತ್ರದ ಬಾರ್ ಕೌನ್ಸಿಲಿನ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ನ್ಯಾಯವಾದಿಗಳ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಎಂದು ಅರ್ಥ;

(ಸಿ) **"ವೃತ್ತಿ ಸಮಾಪ್ತಿ"** ಎಂದರೆ ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 26ಎ ಪ್ರಕರಣದ ಮೇರೆಗೆ ರಾಜ್ಯದ ಪಟ್ಟಿಯಿಂದ ನ್ಯಾಯವಾದಿಯ ಹೆಸರನ್ನು ತೆಗೆದುಹಾಕುವುದು ಎಂದು ಅರ್ಥ;

---

*(ಅನುಸೂಚಿ II ರಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳು ಅನ್ವಯವಾಗುವ ರಾಜ್ಯಗಳಲ್ಲಿ ಹೊರತುಪಡಿಸಿ) ದಿನಾಂಕ 1.11.2001 ರಂದು ಜಾರಿಗೆ ಬಂದಿದೆ. ಎಸ್.ಓ. 946 (ಇ) ದಿನಾಂಕ 26.09.2001 ನೋಡಿ.

(ಡಿ) "ಅಧ್ಯಕ್ಷ" ಎಂದರೆ 4ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿತವಾದ ಟ್ರಸ್ಟೀ ಸಮಿತಿಯ ಅಧ್ಯಕ್ಷ ಎಂದು ಅರ್ಥ;

(ಇ) "ಚಾರ್ಟರ್ಡ್ ಅಕೌಂಟೆಂಟ್" ಎಂದರೆ ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949 (1949ರ 38)ರ 2ನೇ ಪ್ರಕರಣದ (1)ನೇ ಉಪಪ್ರಕಣದ (ಬಿ) ಖಂಡದಲ್ಲಿ ಪರಿಭಾಷಿಸಿದಂತೆ ಮತ್ತು ಆ ಅಧಿನಿಯಮದ 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವೃತ್ತಿ ಪ್ರಮಾಣಪತ್ರವನ್ನು ಪಡೆದಿರುವಂತಹ ಚಾರ್ಟರ್ಡ್ ಅಕೌಂಟೆಂಟ್ ಎಂದು ಅರ್ಥ;

(ಎಫ್) "ಅವಲಂಬಿತರು" ಎಂದರೆ ನಿಧಿಯ ಸದಸ್ಯನ ಗಂಡ/ ಹೆಂಡತಿ, ತಂದೆ-ತಾಯಿ ಅಥವಾ ಅಪ್ರಾಪ್ತ ವಯಸ್ಕ ಮಕ್ಕಳು ಎಂದು ಅರ್ಥ;

(ಜಿ) "ನಿಧಿ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯವಾದಿಗಳ ಕಲ್ಯಾಣ ನಿಧಿ ಎಂದು ಅರ್ಥ;

(ಹೆಚ್) "ವಿಮಾಕರ್ತ" ಎಂಬ ಪದವು ವಿಮಾ ಅಧಿನಿಯಮ, 1938 (1938ರ 4)ರ 2ನೇ ಪ್ರಕರಣದ (9)ನೇ ಖಂಡದಲ್ಲಿ ಅದಕ್ಕೆ ನೀಡಿದ ಅರ್ಥವನ್ನೇ ಹೊಂದಿರತಕ್ಕದ್ದು;

(ಐ) "ನಿಧಿಯ ಸದಸ್ಯ" ಎಂದರೆ ನಿಧಿಯ ಪ್ರಯೋಜನಗಳನ್ನು ಪಡೆಯಲು ಅರ್ಹನಾದ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅದರ ಸದಸ್ಯನಾಗಿ ಮುಂದುವರಿಯುತ್ತಿರುವ ನ್ಯಾಯವಾದಿ ಎಂದು ಅರ್ಥ;

(ಜೆ) "ಅಧಿಸೂಚನೆ" ಎಂದರೆ ಸಮುಚಿತ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ ಮತ್ತು "ಅಧಿಸೂಚಿಸಲಾದ" ಎಂಬ ಪದಾವಳಿಯನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಕೆ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಎಲ್) "ಅನುಸೂಚಿ" ಎಂದರೆ ಈ ಅಧಿನಿಯಮದ ಅನುಸೂಚಿ ಎಂದು ಅರ್ಥ;

(ಎಂ) "ಅನುಸೂಚಿತ ಬ್ಯಾಂಕ್" ಎಂಬ ಪದವು ಭಾರತ ರಿಜರ್ವ್ ಬ್ಯಾಂಕು ಅಧಿನಿಯಮ, 1934 (1934ರ 2)ರ 2ನೇ ಪ್ರಕರಣದ (ಇ) ಖಂಡದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಎನ್) "ಸ್ಟಾಂಪ್" ಎಂದರೆ 26ನೇ ಪ್ರಕರಣದ ಮೇರೆಗೆ ಮುದ್ರಿಸಲಾದ ಮತ್ತು ವಿತರಿಸಲಾದ ನ್ಯಾಯವಾದಿಗಳ ಕಲ್ಯಾಣ ನಿಧಿ ಸ್ಟಾಂಪ್ ಎಂದು ಅರ್ಥ;

(ಒ) "ರಾಜ್ಯ" ಎಂದರೆ ಸಂವಿಧಾನದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಎಂದು ಅರ್ಥ ಮತ್ತು ಅದು ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳತಕ್ಕದ್ದು;

(ಪಿ) "ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್" ಎಂದರೆ 16ನೇ ಪ್ರಕರಣದ ಮೇರೆಗೆ ಆ ರಾಜ್ಯದ ಬಾರ್ ಕೌನ್ಸಿಲಿನಿಂದ ಮಾನ್ಯತೆ ಪಡೆದ ರಾಜ್ಯದಲ್ಲಿನ ನ್ಯಾಯವಾದಿಗಳ ಅಸೋಸಿಯೇಷನ್ ಎಂದು ಅರ್ಥ;

(ಕ್ಯೂ) "ರಾಜ್ಯ ಬಾರ್ ಅಸೋಸಿಯೇಷನ್" ಎಂದರೆ 16ನೇ ಪ್ರಕರಣದ ಮೇರೆಗೆ ಆ ರಾಜ್ಯ ಬಾರ್ ಕೌನ್ಸಿಲ್‌ನಿಂದ ಮಾನ್ಯತೆ ಪಡೆದ ನ್ಯಾಯವಾದಿಗಳ ಅಸೋಸಿಯೇಷನ್ ಎಂದು ಅರ್ಥ;

(ಆರ್) "ರಾಜ್ಯ ಬಾರ್ ಕೌನ್ಸಿಲ್" ಎಂದರೆ ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಬಾರ್ ಕೌನ್ಸಿಲ್ ಎಂದು ಅರ್ಥ;

(ಎಸ್) "ವೃತ್ತಿಯ ಅಮಾನತು" ಎಂದರೆ ನ್ಯಾಯವಾದಿಯಾಗಿ ವೃತ್ತಿಯನ್ನು ಸ್ವಇಚ್ಛೆಯಿಂದ ನಿಲ್ಲಿಸುವುದು ಅಥವಾ ದುರ್ನಡತೆಯ ಕಾರಣಕ್ಕಾಗಿ ರಾಜ್ಯ ಬಾರ್ ಕೌನ್ಸಿಲ್ ನ್ಯಾಯವಾದಿಯನ್ನು ಅಮಾನತು ಮಾಡುವುದು ಎಂದು ಅರ್ಥ;

(ಟಿ) "ಟ್ರಸ್ಟೀ ಸಮಿತಿ" ಎಂದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ನ್ಯಾಯವಾದಿಗಳ ಕಲ್ಯಾಣ ನಿಧಿ ಟ್ರಸ್ಟೀ ಸಮಿತಿ ಎಂದು ಅರ್ಥ;

(ಯು) "ವಕಾಲತ್‌ನಾಮಾ" ವು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ಹಾಜರಾಗುವುದಕ್ಕೆ ಅಥವಾ ವಾದಿಸುವುದಕ್ಕೆ ನ್ಯಾಯವಾದಿಯನ್ನು ಅಧಿಕೃತಗೊಳಿಸಿದ ಹಾಜರಾತಿ ಪತ್ರ ಅಥವಾ ಅದು ಇತರ ಯಾವುದೇ ದಸ್ತಾವೇಜನ್ನು ಒಳಗೊಳ್ಳುತ್ತದೆ.

(ವಿ) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿರದ, ಆದರೆ ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ನ್ಯಾಯವಾದಿಗಳ ಕಲ್ಯಾಣ ನಿಧಿಯ ಸ್ಥಾಪನೆ

**3. ನ್ಯಾಯವಾದಿಗಳ ಕಲ್ಯಾಣ ನಿಧಿ.–** (1) ಸಮುಚಿತ ಸರ್ಕಾರವು "ನ್ಯಾಯವಾದಿಗಳ ಕಲ್ಯಾಣ ನಿಧಿ" ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ನಿಧಿಗೆ,–

(ಎ) 15ನೇ ಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ಸಂದಾಯ ಮಾಡಿದ ಎಲ್ಲಾ ಮೊಬಲಗುಗಳನ್ನು;

(ಬಿ) ರಾಜ್ಯ ಬಾರ್ ಕೌನ್ಸಿಲ್ ನೀಡಿದ ಯಾವುದೇ ಇತರ ವಂತಿಗೆಯನ್ನು;

(ಸಿ) ಭಾರತದ ಬಾರ್ ಕೌನ್ಸಿಲ್, ಯಾವುದೇ ರಾಜ್ಯ ಬಾರ್ ಅಸೋಸಿಯೇಷನ್, ಯಾವುದೇ ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್ ಅಥವಾ ಇತರ ಅಸೋಸಿಯೇಷನ್ ಅಥವಾ ಸಂಸ್ಥೆಯು, ಅಥವಾ ಯಾವನೇ ನ್ಯಾಯವಾದಿ ಅಥವಾ ಇತರ ವ್ಯಕ್ತಿಯು ನಿಧಿಗೆ ಸ್ವಇಚ್ಛೆಯಿಂದ ನೀಡಿದ ಯಾವುದೇ ದೇಣಿಗೆಯನ್ನು ಅಥವಾ ವಂತಿಗೆಯನ್ನು;

(ಡಿ) ಈ ಸಂಬಂಧದಲ್ಲಿ ಯುಕ್ತ ಧನವಿನಿಯೋಗದ ನಂತರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ನಿಧಿಗೆ ನೀಡಬಹುದಾದ ಯಾವುದೇ ಅನುದಾನವನ್ನು;

(ಇ) 12ನೇ ಪ್ರಕರಣದ ಮೇರೆಗೆ ಸಾಲವಾಗಿ ಪಡೆದ ಯಾವುದೇ ಮೊತ್ತಗಳನ್ನು;

(ಎಫ್) 18ನೇ ಪ್ರಕರಣದ ಮೇರೆಗೆ ಸಂಗ್ರಹಿಸಲಾದ ಎಲ್ಲಾ ಮೊತ್ತಗಳನ್ನು;

(ಜಿ) ನಿಧಿಯ ಯಾವುದೇ ಸದಸ್ಯನ ಮರಣದ ಕಾರಣ ಯಾವುದೇ ಸಮೂಹ ವಿಮಾ ಯೋಜನೆ ಮೇರೆಗೆ ಭಾರತ ಜೀವ ವಿಮಾ ನಿಗಮ ಅಥವಾ ಯಾವುದೇ ಇತರ ವಿಮಾಕರ್ತನಿಂದ ಸ್ವೀಕರಿಸಲಾದ ಎಲ್ಲಾ ಮೊತ್ತಗಳನ್ನು;

(ಹೆಚ್) ನಿಧಿಯ ಸದಸ್ಯರ ಸಮೂಹ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ ಭಾರತ ಜೀವ ವಿಮಾ ನಿಗಮದಿಂದ ಅಥವಾ ಯಾವುದೇ ಇತರ ವಿಮಾಕರ್ತನಿಂದ ಸ್ವೀಕರಿಸಿದ ಯಾವುದೇ ಲಾಭವನ್ನು ಅಥವಾ ಲಾಭಾಂಶವನ್ನು ಅಥವಾ ಮರುಪಾವತಿಯನ್ನು;

(ಐ) ನಿಧಿಯ ಯಾವುದೇ ಭಾಗದಿಂದ ಮಾಡಿದ ಯಾವುದೇ ಹೂಡಿಕೆಯ ಮೇಲೆ ಬಂದ ಯಾವುದೇ ಬಡ್ಡಿಯನ್ನು ಅಥವಾ ಲಾಭಾಂಶವನ್ನು ಅಥವಾ ಇತರ ಉತ್ಪತ್ತಿಯನ್ನು;

(ಜೆ) 26ನೇ ಪ್ರಕರಣದ ಮೇರೆಗೆ ಸ್ಟಾಂಪುಗಳ ಮಾರಾಟದ ಮೂಲಕ ಸಂಗ್ರಹಿಸಿದ ಎಲ್ಲಾ ಮೊತ್ತಗಳನ್ನು

– ಜಮೆಮಾಡತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊತ್ತಗಳನ್ನು, ನಿಯಮಿಸಬಹುದಾದಂತಹ ಮಧ್ಯಂತರಗಳಲ್ಲಿ ಮತ್ತು ಅಂತಹ ರೀತಿಯಲ್ಲಿ, ಅಂತಹ ಏಜನ್ಸಿಗಳಿಗೆ ಸಂದಾಯ ಮಾಡತಕ್ಕದ್ದು ಅಥವಾ ಅಂತಹ ಏಜೆನ್ಸಿಗಳ ಮೂಲಕ ಸಂಗ್ರಹ ಮಾಡತಕ್ಕದ್ದು.

## ಅಧ್ಯಾಯ – III

### ಟ್ರಸ್ಟೀ ಸಮಿತಿಯ ಸ್ಥಾಪನೆ

**4. ಟ್ರಸ್ಟೀ ಸಮಿತಿಯ ಸ್ಥಾಪನೆ.–** (1) ಸಮುಚಿತ ಸರ್ಕಾರವು, ಈ ಬಗ್ಗೆ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ "ನ್ಯಾಯವಾದಿಗಳ ಕಲ್ಯಾಣ ನಿಧಿ ಟ್ರಸ್ಟೀ ಸಮಿತಿ" ಎಂದು ಕರೆಯಲಾಗುವ ಒಂದು ಟ್ರಸ್ಟೀ ಸಮಿತಿಯನ್ನು ಸ್ಥಾಪಿಸತಕ್ಕದ್ದು.

(2) ಟ್ರಸ್ಟೀ ಸಮಿತಿಯು, ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಲ್ಲಿ ಅದು ದಾವೆಯನ್ನು ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಟ್ರಸ್ಟೀ ಸಮಿತಿಯು,–

(ಎ) ರಾಜ್ಯದ ಅಡ್ವೋಕೇಟ್ ಜನರಲ್ — ಅಧ್ಯಕ್ಷ, ಪದನಿಮಿತ್ತ:

ಪರಂತು, ಒಂದು ರಾಜ್ಯದಲ್ಲಿ ಅಡ್ವೋಕೇಟ್ ಜನರಲ್ ಇಲ್ಲದಿದ್ದಲ್ಲಿ, ಸಮುಚಿತ ಸರ್ಕಾರವು ಒಬ್ಬ ಹಿರಿಯ ನ್ಯಾಯವಾದಿಯನ್ನು ಅಧ್ಯಕ್ಷನೆಂದು ನಾಮನಿರ್ದೇಶನ ಮಾಡತಕ್ಕದ್ದು;

| | | |
|---|---|---|
| (ಬಿ) | ಸಮುಚಿತ ಸರ್ಕಾರದ ಕಾನೂನು ಇಲಾಖೆಯ ಅಥವಾ ಮಂತ್ರಾಲಯದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ; |
| (ಸಿ) | ಸಮುಚಿತ ಸರ್ಕಾರದ ಗೃಹ ಇಲಾಖೆಯ ಅಥವಾ ಮಂತ್ರಾಲಯದ ಕಾರ್ಯದರ್ಶಿ | ಪದನಿಮಿತ್ತ ಸದಸ್ಯ; |
| (ಡಿ) | ರಾಜ್ಯ ಬಾರ್ ಕೌನ್ಸಿಲಿನ ಅಧ್ಯಕ್ಷ | ಪದನಿಮಿತ್ತ ಸದಸ್ಯ; |
| (ಇ) | ಸಮುಚಿತ ಸರ್ಕಾರವು ನಾಮನಿರ್ದೇಶನ ಮಾಡಬಹುದಾದ ಸರ್ಕಾರಿ ಪ್ಲೀಡರ್ ಅಥವಾ ಪಬ್ಲಿಕ್ ಪ್ರಾಸಿಕ್ಯೂಟರ್ | ಸದಸ್ಯ |
| (ಎಫ್) | ರಾಜ್ಯ ಬಾರ್ ಕೌನ್ಸಿಲ್ ನಾಮ ನಿರ್ದೇಶನ ಮಾಡಬೇಕಾದ ಇಬ್ಬರು ನ್ಯಾಯವಾದಿಗಳು | ಸದಸ್ಯರು |
| (ಜಿ) | ರಾಜ್ಯ ಬಾರ್ ಕೌನ್ಸಿಲಿನ ಕಾರ್ಯದರ್ಶಿ | ಪದನಿಮಿತ್ತ ಕಾರ್ಯದರ್ಶಿ |

– ಇವರುಗಳನ್ನು ಒಳಗೊಂಡಿರತಕ್ಕದ್ದು.

(4) (3)ನೇ ಉಪಪ್ರಕರಣದ (ಎ) ಖಂಡದ ಪರಂತುಕದ ಮೇರೆಗೆ ನಾಮನಿರ್ದೇಶಿತನಾದ ಅಧ್ಯಕ್ಷನು, ತಾನು ಸ್ಥಾನವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳನ್ನು ಮೀರದ ಅವಧಿಗೆ ಆ ಸ್ಥಾನವನ್ನು ಧಾರಣ ಮಾಡತಕ್ಕದ್ದು.

(5) (3)ನೇ ಉಪಪ್ರಕರಣದ (ಇ) ಖಂಡದ ಅಥವಾ (ಎಫ್) ಖಂಡದ ಮೇರೆಗೆ ನಾಮನಿರ್ದೇಶಿತನಾದ ಟ್ರಸ್ಟೀ ಸಮಿತಿಯ ಪ್ರತಿಯೊಬ್ಬ ಸದಸ್ಯನು, ತನ್ನ ಸ್ಥಾನವನ್ನು ವಹಿಸಿಕೊಂಡ ದಿನಾಂಕದಿಂದ ಮೂರು ವರ್ಷಗಳನ್ನು ಮೀರದ ಅವಧಿಗೆ ಆ ಸ್ಥಾನವನ್ನು ಧಾರಣ ಮಾಡತಕ್ಕದ್ದು.

**5. ಟ್ರಸ್ಟೀ ಸಮಿತಿಯ ಅಧ್ಯಕ್ಷನ ಅಥವಾ ಸದಸ್ಯನ ಅನರ್ಹತೆಗಳು ಮತ್ತು ಅವರನ್ನು ತೆಗೆದುಹಾಕುವುದು.**–(1) ಸಮುಚಿತ ಸರ್ಕಾರವು ಟ್ರಸ್ಟೀ ಸಮಿತಿಯ ಅಧ್ಯಕ್ಷನನ್ನು ಅಥವಾ ಯಾವನೇ ಸದಸ್ಯನನ್ನು, ಈ ಮುಂದಿನ ಕಾರಣಗಳಿಗಾಗಿ ಎಂದರೆ,–

(ಎ) ಅವನು ದಿವಾಳಿಯಾಗಿದ್ದರೆ ಅಥವಾ ಯಾವುದೇ ಕಾಲದಲ್ಲಾಗಲಿ ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ಟ್ರಸ್ಟೀ ಸಮಿತಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಸಿ) ಸಮುಚಿತ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ;

(ಡಿ) ಟ್ರಸ್ಟೀ ಸಮಿತಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ತನ್ನ ಕಾರ್ಯಗಳನ್ನು ನಡೆಸುವಲ್ಲಿ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂತಹ ಹಣಕಾಸಿನ ಅಥವಾ ಇತರ ಹಿತಾಸಕ್ತಿಯನ್ನು ಹೊಂದಿದ್ದರೆ;

(ಇ) ಆ ಸ್ಥಾನದಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ತನ್ನ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದರೆ;

(ಎಫ್) ಟ್ರಸ್ಟೀ ಸಮಿತಿಯ ಮೂರಕ್ಕಿಂತ ಹೆಚ್ಚಿನ ನಿರಂತರ ಸಭೆಗಳಿಗೆ ಟ್ರಸ್ಟೀ ಸಮಿತಿಯ ಅನುಮತಿಯಿಲ್ಲದೆ ಗೈರು ಹಾಜರಾದರೆ, ಅಥವಾ ಯಾವುದೇ ಕಾಲದಲ್ಲಿ ಗೈರುಹಾಜರಾಗಿದ್ದರೆ

– ಅವನ ಸ್ಥಾನದಿಂದ ತೆಗೆದುಹಾಕತಕ್ಕದ್ದು:

ಪರಂತು, ಟ್ರಸ್ಟೀ ಸಮಿತಿಯು, ಸಾಕಷ್ಟು ಕಾರಣದ ಮೇಲೆ, ಅಂತಹ ಅಧ್ಯಕ್ಷ ಅಥವಾ ಸದಸ್ಯನ ಗೈರುಹಾಜರಿಯನ್ನು ಮನ್ನಿಸಬಹುದು.

(2) ಟ್ರಸ್ಟೀ ಸಮಿತಿಯ ಅಂತಹ ಅಧ್ಯಕ್ಷನನ್ನು ಅಥವಾ ಸದಸ್ಯನನ್ನು, ತನ್ನ ಅಹವಾಲನ್ನು ಹೇಳಿಕೊಳ್ಳಲು ಅವನಿಗೆ ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು, (1)ನೇ ಉಪಪ್ರಕರಣದ (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ಆತನನ್ನು ತೆಗೆದುಹಾಕತಕ್ಕದ್ದಲ್ಲ.

**6. ಟ್ರಸ್ಟೀ ಸಮಿತಿಯ ನಾಮನಿರ್ದೇಶಿತ ಅಧ್ಯಕ್ಷ ಮತ್ತು ಸದಸ್ಯರ ರಾಜೀನಾಮೆ ಮತ್ತು ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡುವುದು.**– (1) 4ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅಧ್ಯಕ್ಷ ಅಥವಾ ಆ ಪ್ರಕರಣದ (3)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸದಸ್ಯನು, ಸಮುಚಿತ ಸರ್ಕಾರಕ್ಕೆ ಲಿಖಿತದಲ್ಲಿ ಮೂರು ತಿಂಗಳುಗಳ ನೋಟೀಸನ್ನು ನೀಡಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಮತ್ತು

ಸಮುಚಿತ ಸರ್ಕಾರವು ಅಂತಹ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅಂತಹ ಅಧ್ಯಕ್ಷ ಅಥವಾ ಸದಸ್ಯನು ತನ್ನ ಸ್ಥಾನವನ್ನು ತೆರವುಗೊಳಿಸತಕ್ಕದ್ದು.

(2) 4ನೇ ಪ್ರಕರಣದ (3)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ನಾಮನಿರ್ದೇಶಿತನಾದ ಸದಸ್ಯನು, ರಾಜ್ಯ ಬಾರ್ ಕೌನ್ಸಿಲಿಗೆ ಲಿಖಿತದಲ್ಲಿ ಮೂರು ತಿಂಗಳುಗಳ ನೋಟೀಸನ್ನು ನೀಡಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಬಹುದು ಮತ್ತು ರಾಜ್ಯ ಬಾರ್ ಕೌನ್ಸಿಲ್ ಅಂತಹ ರಾಜೀನಾಮೆಯನ್ನು ಅಂಗೀಕರಿಸಿದ ಮೇಲೆ, ಅಂತಹ ಸದಸ್ಯನು ತನ್ನ ಸ್ಥಾನವನ್ನು ತೆರವುಗೊಳಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ, ರಾಜೀನಾಮೆ ನೀಡಿದ ಅಧ್ಯಕ್ಷನ ಅಥವಾ ಸದಸ್ಯನ ಸ್ಥಾನದಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು, ಸಮುಚಿತ ಸರ್ಕಾರವು ಸಾಧ್ಯವಾಗಬಹುದಾದಷ್ಟು ಬೇಗನೆ ಭರ್ತಿ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತನಾದ ಅಧ್ಯಕ್ಷ ಅಥವಾ ಸದಸ್ಯನು, ಯಾವ ಅಧ್ಯಕ್ಷನ ಅಥವಾ ಸದಸ್ಯನ ಸ್ಥಾನದಲ್ಲಿ ಅವನನ್ನು ನಾಮನಿರ್ದೇಶನ ಮಾಡಲಾಗಿದೆಯೋ, ಆ ಅಧ್ಯಕ್ಷ ಅಥವಾ ಸದಸ್ಯನು ಸ್ಥಾನದಲ್ಲಿರಬಹುದಾಗಿದ್ದ ಆ ಉಳಿದ ಅವಧಿಯವರೆಗೆ ಆ ಸ್ಥಾನದಲ್ಲಿರತಕ್ಕದ್ದು.

(4) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ರಾಜೀನಾಮೆ ನೀಡಿದ ಸದಸ್ಯನ ಸ್ಥಾನದಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ರಾಜ್ಯ ಬಾರ್ ಕೌನ್ಸಿಲ್ ಸಾಧ್ಯವಾಗಬಹುದಾದಷ್ಟು ಬೇಗನೆ, ಭರ್ತಿಮಾಡಬಹುದು ಮತ್ತು ಹಾಗೇ ನಾಮನಿರ್ದೇಶಿತನಾದ ಸದಸ್ಯನು, ಯಾವ ಸದಸ್ಯನ ಸ್ಥಾನದಲ್ಲಿ ಅವನನ್ನು ನಾಮನಿರ್ದೇಶನ ಮಾಡಲಾಯಿತೋ, ಆ ಸದಸ್ಯನು ಸ್ಥಾನದಲ್ಲಿರಬಹುದಾಗಿದ್ದ ಆ ಉಳಿದ ಅವಧಿಯವರೆಗೆ ಆ ಸ್ಥಾನದಲ್ಲಿರತಕ್ಕದ್ದು.

**7. ಖಾಲಿಸ್ಥಾನಗಳು, ಇತ್ಯಾದಿಗಳು ಟ್ರಸ್ಟೀ ಸಮಿತಿಯ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.**–ಟ್ರಸ್ಟೀ ಸಮಿತಿಯ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು,–

(ಎ) ಟ್ರಸ್ಟೀ ಸಮಿತಿಯಲ್ಲಿನ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆಯ; ಅಥವಾ

(ಬಿ) ಟ್ರಸ್ಟೀ ಸಮಿತಿಯ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯನ್ನು ನಾಮನಿರ್ದೇಶನ ಮಾಡುವಲ್ಲಿ ಯಾವುದೇ ನ್ಯೂನ್ಯತೆ ಅಥವಾ ಕ್ರಮದೋಷದ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವುಂಟು ಮಾಡದ ಟ್ರಸ್ಟೀ ಸಮಿತಿಯ ಕಾರ್ಯವಿಧಾನದಲ್ಲಿನ ಯಾವುದೇ ಕ್ರಮದೋಷದ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**8. ಟ್ರಸ್ಟೀ ಸಮಿತಿಯ ಸಭೆಗಳು.**– (1) ಟ್ರಸ್ಟೀ ಸಮಿತಿಯು ಕನಿಷ್ಠ ಪ್ರತೀ ಮೂರು ಕ್ಯಾಲೆಂಡರ್ ತಿಂಗಳುಗಳಿಗೊಂದು ಸಲ ಸಭೆ ಸೇರತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗಿನ ಕಾರ್ಯನಿರ್ವಹಣೆಗಾಗಿ ಪ್ರತೀ ವರ್ಷದಲ್ಲಿ ಕನಿಷ್ಠ ಅಂತಹ ನಾಲ್ಕು ಸಭೆಗಳನ್ನು ನಡೆಸತಕ್ಕದ್ದು.

(2) ಟ್ರಸ್ಟೀ ಸಮಿತಿಯ ಮೂವರು ಸದಸ್ಯರು ಟ್ರಸ್ಟೀ ಸಮಿತಿಯ ಸಭೆಗೆ ಕೋರಂ ಆಗಿರತಕ್ಕದ್ದು.

(3) ಟ್ರಸ್ಟೀ ಸಮಿತಿಯ ಅಧ್ಯಕ್ಷನು ಯಾವುದೇ ಕಾರಣಕ್ಕಾಗಿ, ಟ್ರಸ್ಟೀ ಸಮಿತಿಯ ಸಭೆಗೆ ಹಾಜರಾಗಲು ಅಸಮರ್ಥನಾದರೆ, ಸಭೆಯಲ್ಲಿ ಹಾಜರಿರುವ ಟ್ರಸ್ಟೀ ಸಮಿತಿಯ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಯಾವನೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(4) ಟ್ರಸ್ಟೀ ಸಮಿತಿಯ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು, ಅಲ್ಲಿ ಹಾಜರಿರುವ ಮತ್ತು ಮತ ನೀಡುವ ಟ್ರಸ್ಟೀ ಸಮಿತಿಯ ಸದಸ್ಯರ ಬಹು ಮತದ ಮೂಲಕ ತೀರ್ಮಾನಿಸತಕ್ಕದ್ದು, ಮತ್ತು ಸಮಾನವಾದ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ಟ್ರಸ್ಟೀ ಸಮಿತಿಯ ಸದಸ್ಯನು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**9. ಟ್ರಸ್ಟೀ ಸಮಿತಿಯ ನಾಮನಿರ್ದೇಶಿತ ಅಧ್ಯಕ್ಷನಿಗೆ ಮತ್ತು ಸದಸ್ಯರಿಗೆ ಪ್ರಯಾಣ ಮತ್ತು ದಿನಭತ್ಯೆಗಳು.–** 4ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಅಧ್ಯಕ್ಷ ಮತ್ತು ಆ ಪ್ರಕರಣದ (3)ನೇ ಉಪಪ್ರಕರಣದ (ಇ) ಮತ್ತು (ಎಫ್) ಖಂಡಗಳಲ್ಲಿ ಉಲ್ಲೇಖಿತವಾದ ಟ್ರಸ್ಟೀ ಸಮಿತಿಯ ಸದಸ್ಯರು ರಾಜ್ಯ ಬಾರ್ ಕೌನ್ಸಿಲಿನಲ್ಲಿನ ಸದಸ್ಯರಿಗೆ ಅನುಮತಿಸಬಹುದಾದಂಥ ಪ್ರಯಾಣ ಮತ್ತು ದಿನಭತ್ಯೆಗಳನ್ನು ಪಡೆಯುವುದಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

**10. ನಿಧಿಯನ್ನು ನಿಹಿತಗೊಳಿಸುವುದು ಮತ್ತು ಅದರ ವಿನಿಯೋಗ.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಮತ್ತು ಅದರ ಉದ್ದೇಶಗಳಿಗಾಗಿ ನಿಧಿಯು ಟ್ರಸ್ಟೀ ಸಮಿತಿಯಲ್ಲಿ ನಿಹಿತವಾಗಿರತಕ್ಕದ್ದು ಮತ್ತು ಟ್ರಸ್ಟೀ ಸಮಿತಿಯು ಆ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಆ ನಿಧಿಯನ್ನು ವಿನಿಯೋಗಿಸತಕ್ಕದ್ದು.

**11. ಟ್ರಸ್ಟೀ ಸಮಿತಿಯ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿಗೆ ಒಳಪಟ್ಟು, ಟ್ರಸ್ಟೀ ಸಮಿತಿಯು ನಿಧಿಯನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣವು ಒಳಗೊಂಡಿರುವ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಟ್ರಸ್ಟೀ ಸಮಿತಿಯು,–

(ಎ) ಟ್ರಸ್ಟಿನಲ್ಲಿನ ನಿಧಿಗೆ ಸೇರಿದ ಮೊಬಲಗುಗಳನ್ನು ಮತ್ತು ಆಸ್ತಿಗಳನ್ನು ಧಾರಣ ಮಾಡತಕ್ಕದ್ದು;

(ಬಿ) ನಿಧಿಗೆ ಸದಸ್ಯರಾಗಿ ಪ್ರವೇಶ ಅಥವಾ ಮರುಪ್ರವೇಶ ಪಡೆಯಲು ಅರ್ಜಿಗಳನ್ನು ಸ್ವೀಕರಿಸತಕ್ಕದ್ದು, ಮತ್ತು ಅದರ ಸ್ವೀಕೃತಿಯ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಂತಹ ಅರ್ಜಿಗಳನ್ನು ವಿಲೆ ಮಾಡತಕ್ಕದ್ದು;

(ಸಿ) ನಿಧಿಯಿಂದ ಸಂದಾಯ ಮಾಡುವುದಕ್ಕಾಗಿ, ಸಂದರ್ಭಾನುಸಾರ, ನಿಧಿಯ ಸದಸ್ಯರಿಂದ, ಅವರ ನಾಮನಿರ್ದೇಶಿತರಿಂದ ಅಥವಾ ಕಾನೂನುಸಮ್ಮತ ವಾರಸುದಾರರಿಂದ ಅರ್ಜಿಗಳನ್ನು ಸ್ವೀಕರಿಸತಕ್ಕದ್ದು, ಅದು ಸೂಕ್ತವೆಂದು ಭಾವಿಸುವಂಥ ವಿಚಾರಣೆ ನಡೆಸತಕ್ಕದ್ದು ಮತ್ತು ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಐದು ತಿಂಗಳುಗಳೊಳಗೆ ಆ ಅರ್ಜಿಗಳನ್ನು ವಿಲೆ ಮಾಡತಕ್ಕದ್ದು;

(ಡಿ) ಅರ್ಜಿಗಳ ಬಗೆಗಿನ ತನ್ನ ತೀರ್ಮಾನಗಳನ್ನು ಟ್ರಸ್ಟೀ ಸಮಿತಿಯ ವ್ಯವಹರಣೆಯ ಪುಸ್ತಕದಲ್ಲಿ ದಾಖಲಿಸತಕ್ಕದ್ದು;

(ಇ) ನಿಧಿಯ ಸದಸ್ಯರಿಗೆ ಅಥವಾ ಸಂದರ್ಭಾನುಸಾರ ಅವರ ನಾಮನಿರ್ದೇಶಿತರಿಗೆ ಅಥವಾ ಕಾನೂನುಸಮ್ಮತ ವಾರಸುದಾರರಿಗೆ ಅನುಸೂಚಿ **–I** ರಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು;

(ಎಫ್) ಸಮುಚಿತ ಸರ್ಕಾರಕ್ಕೆ ಮತ್ತು ರಾಜ್ಯ ಬಾರ್ ಕೌನ್ಸಿಲಿಗೆ ನಿಯಮಿಸಬಹುದಾದಂತಹ ನಿಯತಕಾಲಿಕ ಮತ್ತು ವಾರ್ಷಿಕ ವರದಿಗಳನ್ನು ಕಳಿಸತಕ್ಕದ್ದು;

(ಜಿ) ನಿಧಿಗೆ ಸದಸ್ಯರಾಗಿ ಪ್ರವೇಶ ಪಡೆಯಲು ಅಥವಾ ಮರು ಪ್ರವೇಶ ಪಡೆಯಲು ಅಥವಾ ನಿಧಿಯ ಪ್ರಯೋಜನದ ಕ್ಲೇಮುಗಳ ಅರ್ಜಿಗಳಿಗೆ ಸಂಬಂಧಿಸಿದಂತೆ ಟ್ರಸ್ಟೀ ಸಮಿತಿಯ ತೀರ್ಮಾನಗಳನ್ನು

ತಲುಪೊಪ್ಪಿಗೆ ಸಹಿತವಾದ ನೋಂದಾಯಿತ ಅಂಚೆಯ ಮೂಲಕ ಅಥವಾ ವಿದ್ಯುನ್ಮಾನ ವಿಧಾನದ ಮೂಲಕ ಅರ್ಜಿದಾರರಿಗೆ ತಿಳಿಸತಕ್ಕದ್ದು;

(ಹೆಚ್) ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಮಾಡಬೇಕಾದ ಅಥವಾ ಮಾಡಬಹುದಾದಂಥ ಇತರ ಕಾರ್ಯಗಳನ್ನು ಮಾಡತಕ್ಕದ್ದು.

**12. ಸಾಲ ತೆಗೆದುಕೊಳ್ಳುವುದು ಮತ್ತು ಹೂಡಿಕೆ.–** (1) ಟ್ರಸ್ಟೀ ಸಮಿತಿಯು, ಸಮುಚಿತ ಸರ್ಕಾರದ ಮತ್ತು ರಾಜ್ಯ ಬಾರ್ ಕೌನ್ಸಿಲಿನ ಪೂರ್ವಾನುಮೋದನೆಯೊಂದಿಗೆ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕಾಲಕಾಲಕ್ಕೆ ಅಗತ್ಯವೆನಿಸಿದ ಯಾವುದೇ ಮೊತ್ತವನ್ನು ಸಾಲವಾಗಿ ತೆಗೆದುಕೊಳ್ಳಬಹುದು.

(2) ಟ್ರಸ್ಟೀ ಸಮಿತಿಯು, ನಿಧಿಯ ಭಾಗವಾಗುವ ಎಲ್ಲಾ ಹಣ ಮತ್ತು ಸ್ವೀಕೃತಿಗಳನ್ನು ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಅಥವಾ ಅದನ್ನು ಸಮುಚಿತ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದ ಸಾಲಪತ್ರಗಳಲ್ಲಿ ಅಥವಾ ಸಮುಚಿತ ಸರ್ಕಾರವು ಹೊರಡಿಸಿದ ಸಾಲಗಳಲ್ಲಿ ಅಥವಾ ಸಮುಚಿತ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ರಾಜ್ಯ ಬಾರ್ ಕೌನ್ಸಿಲ್ ಕಾಲಕಾಲಕ್ಕೆ ನಿರ್ದೇಶಿಸಬಹುದಾದಂತಹ ಯಾವುದೇ ಇತರ ರೀತಿಯಲ್ಲಿ ಹೂಡತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ಬಾಕಿಯಿರುವ ಮತ್ತು ಸಂದಾಯ ಮಾಡಬೇಕಾದ ಎಲ್ಲಾ ಮೊಬಲಗುಗಳನ್ನು ಮತ್ತು ನಿಧಿಯ ನಿರ್ವಹಣೆ ಮತ್ತು ಆಡಳಿತಕ್ಕೆ ಸಂಬಂಧಪಟ್ಟ ಎಲ್ಲಾ ವೆಚ್ಚವನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

**13. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಟ್ರಸ್ಟೀ ಸಮಿತಿಯು ಸರಿಯಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ಅಂತಹ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಕೆಯನ್ನು ಮತ್ತು ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

(2) ಟ್ರಸ್ಟೀ ಸಮಿತಿಯ ಲೆಕ್ಕಪತ್ರಗಳನ್ನು ರಾಜ್ಯ ಬಾರ್ ಕೌನ್ಸಿಲ್ ನೇಮಕಮಾಡಿದ ಚಾರ್ಟರ್ಡ್ ಅಕೌಂಟೆಂಟ್‌ನು ಪ್ರತೀವರ್ಷವೂ ಲೆಕ್ಕಪರಿಶೋಧನೆ ಮಾಡತಕ್ಕದ್ದು.

(3) ಚಾರ್ಟರ್ಡ್ ಅಕೌಂಟೆಂಟ್‌ನು ಲೆಕ್ಕಪರಿಶೋಧನೆ ಮಾಡಿದ ಟ್ರಸ್ಟೀ ಸಮಿತಿಯ ಲೆಕ್ಕಪತ್ರಗಳನ್ನು, ತನ್ನ ಲೆಕ್ಕಪರಿಶೋಧನೆಯ ವರದಿಯೊಂದಿಗೆ ಆ ಸಮಿತಿಯ ಮೂಲಕ ರಾಜ್ಯ ಬಾರ್ ಕೌನ್ಸಿಲಿಗೆ ಕಳಿಸತಕ್ಕದ್ದು ಮತ್ತು ರಾಜ್ಯ ಬಾರ್ ಕೌನ್ಸಿಲ್ ಅದಕ್ಕೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಭಾವಿಸುವಂತಹ ನಿರ್ದೇಶನಗಳನ್ನು ಟ್ರಸ್ಟೀ ಸಮಿತಿಗೆ ನೀಡಬಹುದು.

(4) ಟ್ರಸ್ಟೀ ಸಮಿತಿಯು, (3)ನೇ ಉಪಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ನೀಡಿದ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

(5) ಟ್ರಸ್ಟೀ ಸಮಿತಿಯು ರಾಜ್ಯ ಬಾರ್ ಕೌನ್ಸಿಲ್ ನಿಗದಿಪಡಿಸಬಹುದಾದಂತೆ ಲೆಕ್ಕಪರಿಶೋಧನೆಯ ವೆಚ್ಚಗಳನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು.

**14. ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳು.–** ಟ್ರಸ್ಟೀ ಸಮಿತಿಯ ಕಾರ್ಯದರ್ಶಿಯು,–

(ಎ) ಟ್ರಸ್ಟೀ ಸಮಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅದರ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ಜವಾಬ್ದಾರನಾಗಿರತಕ್ಕದ್ದು;

(ಬಿ) ಟ್ರಸ್ಟೀ ಸಮಿತಿಯ ಪರವಾಗಿರುವ ಮತ್ತು ವಿರುದ್ಧವಾಗಿರುವ ಎಲ್ಲಾ ದಾವೆಗಳಲ್ಲಿ ಮತ್ತು ವ್ಯವಹರಣೆಗಳಲ್ಲಿ ಟ್ರಸ್ಟೀ ಸಮಿತಿಯನ್ನು ಪ್ರತಿನಿಧಿಸತಕ್ಕದ್ದು;

(ಸಿ) ಟ್ರಸ್ಟೀ ಸಮಿತಿಯ ಎಲ್ಲಾ ತೀರ್ಮಾನಗಳನ್ನು ಮತ್ತು ಲಿಖಿತಗಳನ್ನು ತನ್ನ ಸಹಿಯ ಮೂಲಕ ಅಧಿಪ್ರಮಾಣಿಸತಕ್ಕದ್ದು;

(ಡಿ) ಟ್ರಸ್ಟೀ ಸಮಿತಿಯ ಬ್ಯಾಂಕ್ ಖಾತೆಯನ್ನು ಅಧ್ಯಕ್ಷನೊಂದಿಗೆ ಜಂಟಿಯಾಗಿ ನಿರ್ವಹಿಸತಕ್ಕದ್ದು;

(ಇ) ಟ್ರಸ್ಟೀ ಸಮಿತಿಯ ಸಭೆಗಳನ್ನು ಕರೆಯತಕ್ಕದ್ದು ಮತ್ತು ಅಂತಹ ಸಭೆಗಳ ನಡವಳಿಕೆಗಳನ್ನು ಸಿದ್ಧಪಡಿಸತಕ್ಕದ್ದು;

(ಎಫ್) ಅವಶ್ಯವಾದ ಎಲ್ಲಾ ದಾಖಲೆಗಳೊಂದಿಗೆ ಮತ್ತು ಮಾಹಿತಿಯೊಂದಿಗೆ ಟ್ರಸ್ಟೀ ಸಮಿತಿಯ ಸಭೆಗಳಿಗೆ ಹಾಜರಾಗತಕ್ಕದ್ದು;

(ಜಿ) ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಮೂನೆಗಳು, ರಿಜಿಸ್ಟರುಗಳು ಮತ್ತು ಇತರೆ ದಾಖಲೆಗಳನ್ನು ಇಟ್ಟುಕೊಂಡುಬರತಕ್ಕದ್ದು ಮತ್ತು ಟ್ರಸ್ಟೀ ಸಮಿತಿಗೆ ಸಂಬಂಧಿಸಿದ ಎಲ್ಲಾ ಪತ್ರವ್ಯವಹಾರಗಳನ್ನು ನಡೆಸತಕ್ಕದ್ದು;

(ಹೆಚ್) ಹಣಕಾಸು ವರ್ಷದಲ್ಲಿ ಟ್ರಸ್ಟೀ ಸಮಿತಿಯು ನಿರ್ವಹಿಸಿದ ವ್ಯವಹಾರದ ವಾರ್ಷಿಕ ವಿವರಪಟ್ಟಿಯನ್ನು ತಯಾರಿಸತಕ್ಕದ್ದು; ಮತ್ತು

(ಐ) ಟ್ರಸ್ಟೀ ಸಮಿತಿಯು ಮತ್ತು ರಾಜ್ಯ ಬಾರ್ ಕೌನ್ಸಿಲ್ ನಿರ್ದೇಶಿಸಿದಂತಹ ಅಥವಾ ನಿರ್ದೇಶಿಸಬಹುದಾದಂತಹ ಇತರ ಕಾರ್ಯಗಳನ್ನು ಮಾಡತಕ್ಕದ್ದು.

**15. ರಾಜ್ಯ ಬಾರ್ ಕೌನ್ಸಿಲ್ ಕೆಲವು ಮೊತ್ತಗಳನ್ನು ನಿಧಿಗೆ ಸಂದಾಯ ಮಾಡುವುದು.–** ರಾಜ್ಯ ಬಾರ್ ಕೌನ್ಸಿಲ್, ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 24ನೇ ಪ್ರಕರಣದ (ಎಫ್) ಖಂಡದ ಮೇರೆಗೆ ತಾನು ಸ್ವೀಕರಿಸಿದ ದಾಖಲಾತಿ ಫೀಜಿನ ಶೇಕಡ ಇಪ್ಪತ್ತಕ್ಕೆ ಸಮನಾದ ಮೊತ್ತವನ್ನು ವಾರ್ಷಿಕವಾಗಿ ನಿಧಿಗೆ ಸಂದಾಯ ಮಾಡತಕ್ಕದ್ದು.

## ಅಧ್ಯಾಯ - IV

## ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್ನಿನ ಮಾನ್ಯತೆ

**16. ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್‌ಗೆ ರಾಜ್ಯ ಬಾರ್ ಕೌನ್ಸಿಲಿನಿಂದ ಮಾನ್ಯತೆ.–** (1) ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕೆ ಮುಂಚೆ ಅಸೋಸಿಯೇಷನ್ ಎಂದು ನೋಂದಾಯಿತವಾಗಿದ್ದ ಯಾವುದೇ ಹೆಸರಿನಿಂದ ಕರೆಯಲಾಗುವ ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್ನು ಮಾನ್ಯತೆಯನ್ನು ಪಡೆಯಲು ಈ ಬಗ್ಗೆ ರಾಜ್ಯ ಬಾರ್ ಕೌನ್ಸಿಲ್ ಅಧಿಸೂಚಿಸುವ ದಿನಾಂಕಕ್ಕೆ ಮುಂಚೆ, ನಿಯಮಿಸಬಹುದಾದಂತಹ ನಮೂನೆಯಲ್ಲಿ ರಾಜ್ಯ ಬಾರ್ ಕೌನ್ಸಿಲ್‌ಗೆ ಅರ್ಜಿ ಸಲ್ಲಿಸಬಹುದು.

(2) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಥವಾ ಆನಂತರ ಅಸೋಸಿಯೇಷನ್ ಎಂದು ನೋಂದಾಯಿತವಾಗಿದ್ದು, ಯಾವುದೇ ಹೆಸರಿನಿಂದ ಕರೆಯಲಾಗುವ ನ್ಯಾಯವಾದಿಗಳ ಯಾವುದೇ ಅಸೋಸಿಯೇಷನ್, ಅದು ಅಸೋಸಿಯೇಷನ್ ಎಂದು ನೋಂದಣಿಯಾದ ದಿನಾಂಕದಿಂದ ಮೂರು ತಿಂಗಳುಗಳೊಳಗೆ, ನಿಯಮಿಸಬಹುದಾದಂತಹ ನಮೂನೆಯಲ್ಲಿ ರಾಜ್ಯ ಬಾರ್ ಕೌನ್ಸಿಲ್‌ಗೆ ಮಾನ್ಯತೆಗಾಗಿ ಅರ್ಜಿ ಸಲ್ಲಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಾನ್ಯತೆ ಪಡೆಯಲು ಸಲ್ಲಿಸುವ ಪ್ರತಿಯೊಂದು ಅರ್ಜಿಯು,–

(ಎ) ಅಸೋಸಿಯೇಷನ್ನಿನ ನಿಯಮಗಳ ಅಥವಾ ಉಪವಿಧಿಗಳ ಪ್ರತಿಯನ್ನು;

(ಬಿ) ಅಸೋಸಿಯೇಷನ್ನಿನ ಪದಾಧಿಕಾರಿಗಳ ಹೆಸರುಗಳು ಮತ್ತು ವಿಳಾಸಗಳನ್ನು;

(ಸಿ) ಅಸೋಸಿಯೇಷನ್ನಿನ ಸದಸ್ಯರ ಹೆಸರು, ವಿಳಾಸ, ವಯಸ್ಸು, ದಾಖಲಾತಿ ಕ್ರಮಾಂಕ ಮತ್ತು ರಾಜ್ಯ ಬಾರ್ ಕೌನ್ಸಿಲಿನಲ್ಲಿ ದಾಖಲಾತಿ ಪಡೆದ ದಿನಾಂಕ ಮತ್ತು ಪ್ರತಿಯೊಬ್ಬ ಸದಸ್ಯನ ವೃತ್ತಿಯ ಸಾಮಾನ್ಯ ಸ್ಥಳ – ಈ ಎಲ್ಲವುಗಳನ್ನು ಹೊಂದಿದ ಸದಸ್ಯರ ಪಟ್ಟಿಯನ್ನು

– ಒಳಗೊಂಡಿರತಕ್ಕದ್ದು.

(4) ರಾಜ್ಯ ಬಾರ್ ಕೌನ್ಸಿಲ್, ತಾನು ಅಗತ್ಯವೆಂದು ಭಾವಿಸುವಂತಹ ವಿಚಾರಣೆಯನ್ನು ಮಾಡಿದ ನಂತರ, ಅಸೋಸಿಯೇಷನ್ನಿನ ಮಾನ್ಯತೆ ನೀಡಬಹುದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಮಾನ್ಯತೆಯ ಪ್ರಮಾಣಪತ್ರವನ್ನು ನೀಡಬಹುದು.

(5) (4)ನೇ ಉಪಪ್ರಕರಣದ ಮೇರೆಗೆ ಅಸೋಸಿಯೇಷನ್ನಿನ ಮಾನ್ಯತೆಗೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ರಾಜ್ಯ ಬಾರ್ ಕೌನ್ಸಿಲಿನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

**ವಿವರಣೆ.**– ಈ ಪ್ರಕರಣದಲ್ಲಿ, "ನೋಂದಾಯಿತವಾದ" ಎಂದರೆ, ಸೊಸೈಟಿಗಳ ನೋಂದಣಿ ಅಧಿನಿಯಮ, 1860 (1860ರ 21)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ನೋಂದಾಯಿತವಾದ ಅಥವಾ ನೋಂದಾಯಿತವಾದುದೆಂದು ಭಾವಿಸಲಾದುದು ಎಂದು ಅರ್ಥ.

**17. ರಾಜ್ಯ ಬಾರ್ ಅಸೋಸಿಯೇಷನ್‌ಗಳ ಹಾಗೂ ರಾಜ್ಯ ನ್ಯಾಯವಾದಿ ಅಸೋಸಿಯೇಷನ್‌ಗಳ ಕರ್ತವ್ಯಗಳು.–** ಪ್ರತಿಯೊಂದು ರಾಜ್ಯ ಬಾರ್ ಅಸೋಸಿಯೇಷನ್ ಮತ್ತು ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್ ಪ್ರತೀ ವರ್ಷದ ಏಪ್ರಿಲ್ 15ರಂದು ಅಥವಾ ಅದಕ್ಕಿಂತ ಮುಂಚೆ, ಆ ವರ್ಷದ ಮಾರ್ಚ್ 31ರಂದು ಇದ್ದಂತೆ ತನ್ನ ಸದಸ್ಯರ ಪಟ್ಟಿಯನ್ನು ರಾಜ್ಯ ಬಾರ್ ಕೌನ್ಸಿಲಿಗೆ ಒದಗಿಸತಕ್ಕದ್ದು.

(2) ಪ್ರತಿಯೊಂದು ರಾಜ್ಯ ಬಾರ್ ಅಸೋಸಿಯೇಷನ್ ಮತ್ತು ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್,–

(ಎ) ಸದಸ್ಯರ ಸೇರ್ಪಡೆ ಮತ್ತು ಮರುಸೇರ್ಪಡೆಯೂ ಸೇರಿದಂತೆ ಸದಸ್ಯತ್ವದಲ್ಲಿನ ಯಾವುದೇ ಬದಲಾವಣೆಯನ್ನು, ಅಂಥ ಬದಲಾವಣೆಯಾದ ಮೂವತ್ತು ದಿನಗಳೊಳಗೆ;

(ಬಿ) ತನ್ನ ಯಾರೇ ಸದಸ್ಯರ ನಿಧನದ ಅಥವಾ ವೃತ್ತಿಯ ಸಮಾಪ್ತಿಯ ಅಥವಾ ಸ್ವಇಚ್ಛೆಯಿಂದ ವೃತ್ತಿಯನ್ನು ನಿಲ್ಲಿಸಿದ ಬಗ್ಗೆ ಅದು ನಡೆದ ದಿನಾಂಕದಿಂದ ಮೂವತ್ತು ದಿನಗಳೊಳಗೆ;

(ಸಿ) ಕಾಲಕಾಲಕ್ಕೆ ರಾಜ್ಯ ಬಾರ್ ಕೌನ್ಸಿಲ್ ಅಗತ್ಯಪಡಿಸಬಹುದಾದಂತಹ ಇತರ ವಿಷಯಗಳನ್ನು

– ರಾಜ್ಯ ಬಾರ್ ಕೌನ್ಸಿಲಿಗೆ ತಿಳಿಸತಕ್ಕದ್ದು.

## ಅಧ್ಯಾಯ – V

## ನ್ಯಾಯವಾದಿಗಳ ಕಲ್ಯಾಣ ನಿಧಿಯ ಸದಸ್ಯತ್ವ ಮತ್ತು ಆ ನಿಧಿಯಿಂದ ಮಾಡಬೇಕಾದ ಸಂದಾಯ

**18. ನಿಧಿಯ ಸದಸ್ಯತ್ವ.–** (1) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ, ರಾಜ್ಯದ ಯಾವುದೇ ನ್ಯಾಯಾಲಯದಲ್ಲಿ, ನ್ಯಾಯಾಧಿಕರಣದಲ್ಲಿ ಅಥವಾ ಇತರ ಪ್ರಾಧಿಕಾರದಲ್ಲಿ ವೃತ್ತಿಯನ್ನು ನಡೆಸುತ್ತಿರುವ ಮತ್ತು ಆ ರಾಜ್ಯದಲ್ಲಿರುವ ರಾಜ್ಯ ಬಾರ್ ಅಸೋಸಿಯೇಷನ್ ಅಥವಾ ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್ನಿನ

ಸದಸ್ಯನಾಗಿರುವ ಪ್ರತಿಯೊಬ್ಬ ನ್ಯಾಯವಾದಿಯು, ಈ ಅಧಿನಿಯಮವು ಪ್ರಾರಂಭವಾದ ಆರು ತಿಂಗಳುಗಳೊಳಗೆ, ನಿಧಿಯ ಸದಸ್ಯನಾಗಿ ಪ್ರವೇಶ ಪಡೆಯಲು ನಿಯಮಿಸಬಹುದಾದಂಥ ನಮೂನೆಯಲ್ಲಿ ಟ್ರಸ್ಟೀ ಸಮಿತಿಗೆ ಅರ್ಜಿ ಸಲ್ಲಿಸತಕ್ಕದ್ದು.

(2) (ಎ) ಈ ಅಧಿನಿಯಮದ ಪ್ರಾರಂಭದ ನಂತರ, ರಾಜ್ಯ ಬಾರ್ ಕೌನ್ಸಿಲಿನ ಪಟ್ಟಿಯಲ್ಲಿ ನ್ಯಾಯವಾದಿಯಾಗಿ ಸೇರ್ಪಡೆಯಾದ;

(ಬಿ) ರಾಜ್ಯದಲ್ಲಿರುವ ಯಾವುದೇ ನ್ಯಾಯಾಲಯದಲ್ಲಿ, ನ್ಯಾಯಾಧಿಕರಣದಲ್ಲಿ ಅಥವಾ ಇತರ ಪ್ರಾಧಿಕಾರದಲ್ಲಿ ವೃತ್ತಿ ನಡೆಸುತ್ತಿರುವ ಮತ್ತು ಆ ರಾಜ್ಯದಲ್ಲಿರುವ ರಾಜ್ಯ ಬಾರ್ ಅಸೋಸಿಯೇಷನ್‌ನಲ್ಲಿ ಅಥವಾ ರಾಜ್ಯ ಬಾರ್ ಕೌನ್ಸಿಲಿನಲ್ಲಿ ಸದಸ್ಯನಾಗಿರುವ

– ಪ್ರತಿಯೊಬ್ಬ ವ್ಯಕ್ತಿಯು, ನ್ಯಾಯವಾದಿಯಾಗಿ ತಾನು ದಾಖಲಾದ ಆರು ತಿಂಗಳುಗಳೊಳಗೆ, ನಿಧಿಯ ಸದಸ್ಯನಾಗಿ ಪ್ರವೇಶವನ್ನು ಪಡೆಯುವುದಕ್ಕೆ ನಿಯಮಿಸಬಹುದಾದಂತಹ ನಮೂನೆಯಲ್ಲಿ ಟ್ರಸ್ಟೀ ಸಮಿತಿಗೆ ಅರ್ಜಿ ಸಲ್ಲಿಸತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಟ್ರಸ್ಟೀ ಸಮಿತಿಯು ತಾನು ಸೂಕ್ತವೆಂದು ಭಾವಿಸಬಹುದಾದಂತಹ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಅರ್ಜಿದಾರನನ್ನು ನಿಧಿಗೆ ಸೇರಿಸಿಕೊಳ್ಳತಕ್ಕದ್ದು ಅಥವಾ ಅದನ್ನು ತಿರಸ್ಕರಿಸಲು ಕಾರಣಗಳಿದ್ದಲ್ಲಿ ಅವುಗಳನ್ನು ಬರಹದಲ್ಲಿ ದಾಖಲಿಸಿ, ಅರ್ಜಿಯನ್ನು ತಿರಸ್ಕರಿಸತಕ್ಕದ್ದು:

ಪರಂತು, ಅರ್ಜಿದಾರನಿಗೆ, ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು, ಅರ್ಜಿಯನ್ನು ತಿರಸ್ಕರಿಸುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(4) ಪ್ರತಿಯೊಬ್ಬ ಅರ್ಜಿದಾರನು, ಟ್ರಸ್ಟೀ ಸಮಿತಿಯ ಖಾತೆಗೆ ಅರ್ಜಿಯೊಂದಿಗೆ ಇನ್ನೂರು ರೂಪಾಯಿಗಳ ಅರ್ಜಿ ಶುಲ್ಕವನ್ನು ಪಾವತಿ ಮಾಡತಕ್ಕದ್ದು.

(5) ನಿಧಿಯ ಸದಸ್ಯನಾಗಿರುವ ಪ್ರತಿಯೊಬ್ಬ ನ್ಯಾಯವಾದಿಯು, ಪ್ರತೀ ವರ್ಷದ ಮಾರ್ಚ್ 31ರಂದು ಅಥವಾ ಅದಕ್ಕಿಂತ ಮುಂಚೆ ನಿಧಿಗೆ ಐವತ್ತು ರೂಪಾಯಿಗಳ ವಾರ್ಷಿಕ ಚಂದಾವನ್ನು ಪಾವತಿ ಮಾಡತಕ್ಕದ್ದು:

ಪರಂತು, (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಪ್ರತಿಯೊಬ್ಬ ನ್ಯಾಯವಾದಿಯು, ತಾನು ನಿಧಿಯ ಸದಸ್ಯನಾದ ಮೂರು ತಿಂಗಳುಗಳೊಳಗೆ ತನ್ನ ಮೊದಲ ವಾರ್ಷಿಕ ಚಂದಾವನ್ನು ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಹಿರಿಯ ನ್ಯಾಯವಾದಿಯು ಒಂದು ಸಾವಿರ ರೂಪಾಯಿಗಳ ವಾರ್ಷಿಕ ಚಂದಾವನ್ನು ಸಂದಾಯ ಮಾಡತಕ್ಕದ್ದು.

(6) ನಿಧಿಯ ಯಾರೇ ಸದಸ್ಯನು ಯಾವುದೇ ವರ್ಷಕ್ಕೆ, ಆ ವರ್ಷದ ಮಾರ್ಚ್ 31ಕ್ಕೆ ಮುಂಚೆ ವಾರ್ಷಿಕ ಚಂದಾವನ್ನು ಸಂದಾಯ ಮಾಡುವುದಕ್ಕೆ ವಿಫಲನಾದರೆ ನಿಧಿಯ ಸದಸ್ಯತ್ವದಿಂದ ತೆಗೆದುಹಾಕುವುದಕ್ಕೆ ಗುರಿಯಾಗತಕ್ಕದ್ದು.

(7) (6)ನೇ ಉಪಪ್ರಕರಣದ ಮೇರೆಗೆ ನಿಧಿಯ ಸದಸ್ಯತ್ವದಿಂದ ತೆಗೆದುಹಾಕಲಾದ ನಿಧಿಯ ಸದಸ್ಯನನ್ನು ಹತ್ತು ರೂಪಾಯಿಗಳ ಮರುಪ್ರವೇಶ ಶುಲ್ಕದೊಂದಿಗೆ ಬಾಕಿಯನ್ನು ಸಂದಾಯ ಮಾಡಿದ ಮೇಲೆ ತೆಗೆದುಹಾಕಲಾದಂಥ ದಿನಾಂಕದಿಂದ ಆರು ತಿಂಗಳುಗಳೊಳಗೆ ನಿಧಿಗೆ ಅವನನ್ನು ಪುನಃ ಸೇರಿಸಿಕೊಳ್ಳಬಹುದು.

(8) ನಿಧಿಯ ಪ್ರತಿಯೊಬ್ಬ ಸದಸ್ಯನು, ಅವನು ನಿಧನ ಹೊಂದಿದ ಸಂದರ್ಭದಲ್ಲಿ, ಈ ಅಧಿನಿಯಮದ ಮೇರೆಗೆ ಅವನಿಗೆ ಸಂದಾಯ ಮಾಡಬೇಕಾದ ಯಾವುದೇ ಮೊಬಲಗನ್ನು ಸ್ವೀಕರಿಸುವ ಹಕ್ಕನ್ನು ತನ್ನ ಒಬ್ಬ ಅಥವಾ ಹೆಚ್ಚು ಅವಲಂಬಿತರಿಗೆ ಪ್ರದಾನ ಮಾಡಿ, ನಿಧಿಯ ಸದಸ್ಯತ್ವಕ್ಕೆ ಪ್ರವೇಶ ಪಡೆಯುವ ಕಾಲದಲ್ಲಿ ಅವನನ್ನು/ ಅವರನ್ನು ನಾಮನಿರ್ದೇಶನ ಮಾಡತಕ್ಕದ್ದು.

(9) ನಿಧಿಯ ಸದಸ್ಯನು (8)ನೇ ಉಪಪ್ರಕರಣದ ಮೇರೆಗೆ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳನ್ನು ನಾಮನಿರ್ದೇಶಿಸಿದ್ದರೆ, ಪ್ರತಿಯೊಬ್ಬ ನಾಮನಿರ್ದೇಶಿತರಿಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಅಥವಾ ಅದರ ಭಾಗವನ್ನು, ನಾಮನಿರ್ದೇಶನದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(10) ನಿಧಿಯ ಸದಸ್ಯನು, ಟ್ರಸ್ಟೀ ಸಮಿತಿಗೆ ಲಿಖಿತದಲ್ಲಿ ನೋಟೀಸನ್ನು ಕಳುಹಿಸುವ ಮೂಲಕ ಯಾವುದೇ ಕಾಲದಲ್ಲಿ ನಾಮನಿರ್ದೇಶನವನ್ನು ರದ್ದುಗೊಳಿಸಬಹುದು.

(11) (10)ನೇ ಉಪಪ್ರಕರಣದ ಮೇರೆಗೆ ತಾನು ಮಾಡಿದ್ದ ನಾಮನಿರ್ದೇಶನವನ್ನು ರದ್ದುಗೊಳಿಸಿದ ನಿಧಿಯ ಪ್ರತಿಯೊಬ್ಬ ಸದಸ್ಯನು, ಐದು ರೂಪಾಯಿಗಳ ನೋಂದಣಿ ಫೀಜಿನೊಂದಿಗೆ ಹೊಸ ನಾಮನಿರ್ದೇಶನ ಮಾಡತಕ್ಕದ್ದು.

(12) ನ್ಯಾಯವಾದಿಗಳ ಅಧಿನಿಯಮ, 1961 (1961ರ 25)ರ 26ಎ ಪ್ರಕರಣದ ಮೇರೆಗೆ ರಾಜ್ಯದ ಪಟ್ಟಿಯಿಂದ ಯಾರ ಹೆಸರನ್ನು ತೆಗೆದುಹಾಕಲಾಗಿದೆಯೋ ಅಥವಾ ಯಾರು ಸ್ವಯಿಚ್ಛೆಯಿಂದ ವೃತ್ತಿಯನ್ನು ನಿಲ್ಲಿಸಿದ್ದಾನೋ ಅಂತಹ ಪ್ರತಿಯೊಬ್ಬ ನಿಧಿಯ ಸದಸ್ಯನು, ಅಂಥ ತೆಗೆದುಹಾಕುವಿಕೆ ಅಥವಾ ವೃತ್ತಿಯನ್ನು ನಿಲ್ಲಿಸಿದ ಬಗ್ಗೆ ಹದಿನೈದು ದಿನಗಳೊಳಗೆ, ಹಾಗೆ ತೆಗೆದುಹಾಕಿದ ಬಗ್ಗೆ ಅಥವಾ ವೃತ್ತಿಯನ್ನು ನಿಲ್ಲಿಸಿದ ಬಗ್ಗೆ ಟ್ರಸ್ಟೀ ಸಮಿತಿಗೆ ತಿಳಿಸತಕ್ಕದ್ದು ಮತ್ತು ನಿಧಿಯ ಯಾವನೇ ಸದಸ್ಯನು, ಸಾಕಷ್ಟು ಕಾರಣವಿಲ್ಲದೆ ಹಾಗೆ ತಿಳಿಸಲು ವಿಫಲನಾದರೆ, ಟ್ರಸ್ಟೀ ಸಮಿತಿಯು, ನಿಯಮಿಸಬಹುದಾದಂತಹ ತತ್ವಗಳಿಗನುಸಾರವಾಗಿ ಈ ಅಧಿನಿಯಮದ ಮೇರೆಗೆ ಆ ಸದಸ್ಯನಿಗೆ ಸಂದಾಯ ಮಾಡಬೇಕಾದ ಮೊಬಲಗಿನಲ್ಲಿ ಕಡಿತ ಮಾಡಬಹುದು.

**19. ನಿಧಿಯ ಸದಸ್ಯನಿಗೆ ಅನುಗ್ರಹಪೂರ್ವಕ ಅನುದಾನ.–** ಟ್ರಸ್ಟೀ ಸಮಿತಿಗೆ ನಿಧಿಯ ಸದಸ್ಯನು ಸಲ್ಲಿಸಿದ ಅರ್ಜಿಯ ಮೇರೆಗೆ ಮತ್ತು ಕ್ಲೇಮಿನ ನೈಜತೆಯ ಬಗ್ಗೆ ಮನವರಿಕೆ ಮಾಡಿಕೊಂಡ ನಂತರ,–

(ಎ) ಅವನು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿರುವ ಅಥವಾ ತೀವ್ರ ಸ್ವರೂಪದ ಶಸ್ತ್ರ ಚಿಕಿತ್ಸೆಗೆ ಒಳಗಾಗಿರುವ ಸಂದರ್ಭದಲ್ಲಿ; ಅಥವಾ

(ಬಿ) ಅವನು ಕ್ಷಯ, ಕುಷ್ಠ, ಪಾರ್ಶ್ವವಾಯು, ಕ್ಯಾನ್ಸರ್, ಮಾನಸಿಕ ಅಸ್ವಸ್ಥತೆ ಅಥವಾ ಅಂತಹ ಇತರ ಗಂಭೀರ ರೋಗ ಅಥವಾ ನಿಃಶಕ್ತತೆಯಿಂದ ನರಳುತ್ತಿದ್ದರೆ.

– ಅಂತಹ ಸದಸ್ಯನಿಗೆ ನಿಧಿಯಿಂದ ಅನುಗ್ರಹ ಪೂರ್ವಕ ಅನುದಾನವನ್ನು ನೀಡಬಹುದು.

**20. ಪುನರವಲೋಕನ.–** ಟ್ರಸ್ಟೀ ಸಮಿತಿಯು, ತಾನಾಗಿಯೇ ಆಗಲಿ ಅಥವಾ ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯಿಂದ ಸ್ವೀಕರಿಸಿದ ಅರ್ಜಿಯ ಮೇರೆಗಾಗಲಿ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ತಾನು ಯಾವುದೇ ಆದೇಶವನ್ನು ಮಾಡಿದ ತೊಂಬತ್ತು ದಿನಗಳೊಳಗೆ, ಯಾವುದೇ ಸಂಗತಿಯ ಅಥವಾ ಕಾನೂನಿನ ತಪ್ಪು ಗ್ರಹಿಕೆಯಿಂದಾಗಲಿ ಅಥವಾ ಯಾವುದೇ ಮಹತ್ವದ ಸಂಗತಿಯು ತಿಳಿಯದಿರುವುದರಿಂದಾಗಿ ಅದನ್ನು ಮಾಡಿದ್ದರೆ, ಅಂತಹ ಆದೇಶದ ಪುನರವಲೋಕನ ಮಾಡಬಹುದು:

ಪರಂತು, ಟ್ರಸ್ಟೀ ಸಮಿತಿಯು, ಅಂತಹ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶವನ್ನು ನೀಡಿದ ಹೊರತು, ಈ ಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ಪ್ರತಿಕೂಲ ಪರಿಣಾಮವನ್ನುಂಟು ಮಾಡುವಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

**21. ವೃತ್ತಿ ಸಮಾಪ್ತಿಯ ನಂತರ ಮೊಬಲಗಿನ ಸಂದಾಯ.–** (1) ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ನಿಧಿಯ ಸದಸ್ಯನಾಗಿದ್ದ ಪ್ರತಿಯೊಬ್ಬ ನ್ಯಾಯವಾದಿಗೆ, ಆತನ ವೃತ್ತಿಯು ಸಮಾಪ್ತಿಯಾದ ನಂತರ ಅನುಸೂಚಿ–I ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಪರಂತು, ಟ್ರಸ್ಟೀ ಸಮಿತಿಯು, ನಿಧಿಯ ಸದಸ್ಯನು ಅಂತಹ ನಿಧಿಯ ಸದಸ್ಯನಾಗಿ ಪ್ರವೇಶ ಪಡೆದ ದಿನಾಂಕದಿಂದ ಐದು ವರ್ಷಗಳ ಅವಧಿಯೊಳಗೆ ಯಾವುದೇ ಶಾಶ್ವತ ನಿಃಶಕ್ತತೆಯಿಂದಾಗಿ ವೃತ್ತಿಯನ್ನು ನಿಲ್ಲಿಸಿರುವನೆಂದು ಮನವರಿಕೆ ಮಾಡಿಕೊಂಡರೆ, ಟ್ರಸ್ಟೀ ಸಮಿತಿಯು, ಅಂತಹ ಸದಸ್ಯನಿಗೆ ಅನುಸೂಚಿ– I ರಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಮೊಬಲಗನ್ನು ಸಂದಾಯ ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಮೊಬಲಗನ್ನು ಸ್ವೀಕರಿಸುವುದಕ್ಕೆ ಮುಂಚೆಯೇ ನಿಧಿಯ ಸದಸ್ಯನು ಮರಣ ಹೊಂದಿದರೆ, ಸಂದರ್ಭಾನುಸಾರ, ಅವನ ನಾಮನಿರ್ದೇಶಿತನಿಗೆ ಅಥವಾ ಕಾನೂನುಸಮ್ಮತ ವಾರಸುದಾರನಿಗೆ, ನಿಧಿಯ ಮೃತ ಸದಸ್ಯನಿಗೆ ಸಂದಾಯ ಮಾಡಬೇಕಾಗಿದ್ದ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

**22. ನಿಧಿಯಲ್ಲಿ ಸದಸ್ಯನಿಗಿರುವ ಹಿತಾಸಕ್ತಿಯ ಪರಭಾರೆ, ಜಪ್ತಿ ಇತ್ಯಾದಿಯ ಮೇಲೆ ನಿರ್ಬಂಧ.–** (1) ಯಾರೇ ಸದಸ್ಯನಿಗೆ ನಿಧಿಯಲ್ಲಿ ಇರುವ ಹಿತಾಸಕ್ತಿಯನ್ನು ಅಥವಾ ನಿಧಿಯಿಂದ ಯಾವುದೇ ಮೊಬಲಗನ್ನು ಸ್ವೀಕರಿಸುವುದಕ್ಕೆ ಇರುವ, ನಿಧಿಯ ಸದಸ್ಯನ ಅಥವಾ ಆತನ ನಾಮನಿರ್ದೇಶಿತನ ಅಥವಾ ಕಾನೂನುಸಮ್ಮತ ವಾರಸುದಾರನ ಹಕ್ಕನ್ನು ಹಸ್ತಾಂತರಿಸತಕ್ಕದ್ದಲ್ಲ, ಪರಭಾರೆ ಮಾಡತಕ್ಕದ್ದಲ್ಲ ಅಥವಾ ಪೂರ್ವಾಧಿಪಡಿಸತಕ್ಕದ್ದಲ್ಲ ಮತ್ತು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಯಾವುದೇ ಡಿಕ್ರಿಯ ಅಥವಾ ಆದೇಶದ ಮೇರೆಗೆ ಅದು ಜಪ್ತಿಗೆ ಗುರಿಯಾಗತಕ್ಕದ್ದಲ್ಲ.

(2) ನಿಧಿಯ ವಿರುದ್ಧ ಅಥವಾ ನಿಧಿಯ ಯಾರೇ ಸದಸ್ಯನ ಅಥವಾ ಅವನ ನಾಮನಿರ್ದೇಶಿತನ ಅಥವಾ ಕಾನೂನುಸಮ್ಮತ ವಾರಸುದಾರನ ಹಿತಾಸಕ್ತಿಯ ವಿರುದ್ಧ ಯಾವನೇ ಸಾಲ ಕೊಟ್ಟವನು ಕಾನೂನುಕ್ರಮ ಜರುಗಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಸಾಲಕೊಟ್ಟವನು" ಎಂಬುದು ದಿವಾಳಿತನಕ್ಕೆ ಸಂಬಂಧಿಸಿದಂತೆ ರಾಜ್ಯವನ್ನು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ನೇಮಕಗೊಂಡ ಅಧಿಕೃತ ವಿಲೇವಾರಿದಾರನನ್ನು ಅಥವಾ ಅಧಿಕೃತ ರಿಸೀವರನನ್ನು ಒಳಗೊಳ್ಳುತ್ತದೆ.

**23. ಆದಾಯ ತೆರಿಗೆಯಿಂದ ವಿನಾಯಿತಿ.–** ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರಲ್ಲಿ ಅಥವಾ ಆದಾಯ, ಲಾಭಗಳು ಮತ್ತು ಗಳಿಕೆಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿತವಾದ ನಿಧಿಗೆ ಪ್ರಾಪ್ತವಾದ ಆದಾಯಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ ಇರತಕ್ಕದ್ದು.

**24. ನಿಧಿಯ ಸದಸ್ಯರಿಗೆ ಸಮೂಹ ಜೀವವಿಮೆ ಮತ್ತು ಇತರ ಪ್ರಯೋಜನಗಳು.–** ಟ್ರಸ್ಟೀ ಸಮಿತಿಯು, ನಿಧಿಯ ಸದಸ್ಯರ ಕಲ್ಯಾಣಕ್ಕಾಗಿ,–

(ಎ) ಭಾರತೀಯ ಜೀವ ವಿಮಾ ನಿಗಮದಿಂದ ಅಥವಾ ಯಾವುದೇ ಇತರ ವಿಮಾಕರ್ತರಿಂದ, ನಿಧಿಯ ಸದಸ್ಯರ ಸಮೂಹ ಜೀವ ವಿಮೆ ಪಾಲಿಸಿಗಳನ್ನು ಪಡೆಯಬಹುದು; ಅಥವಾ

(ಬಿ) ನಿಯಮಿಸಬಹುದಾದಂಥ ರೀತಿಯಲ್ಲಿ ನಿಧಿಯ ಸದಸ್ಯರಿಗೆ ಮತ್ತು ಅವರ ಅವಲಂಬಿತರಿಗೆ, ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬಹುದು; ಅಥವಾ

(ಸಿ) ನಿಧಿಯ ಸದಸ್ಯರಿಗೆ, ಪುಸ್ತಕಗಳ ಖರೀದಿಗಾಗಿ ಹಣವನ್ನು ಒದಗಿಸಬಹುದು; ಅಥವಾ

(ಡಿ) ನಿಧಿಯ ಸದಸ್ಯರಿಗೆ, ಸಾಮಾನ್ಯ ಸೌಲಭ್ಯಗಳನ್ನು ನಿರ್ಮಿಸಲು ಅಥವಾ ನಿರ್ವಹಿಸಿಕೊಂಡು ಹೋಗಲು ಹಣವನ್ನು ಒದಗಿಸಬಹುದು:

ಪರಂತು, ಟ್ರಸ್ಟೀ ಸಮಿತಿಯು, ಅಧೀನ ನ್ಯಾಯಾಲಯಗಳಲ್ಲಿ ವೃತ್ತಿ ನಿರ್ವಹಿಸುವ ನಿಧಿಯ ಸದಸ್ಯರಿಗೆ ಸಾಮಾನ್ಯ ಸೌಲಭ್ಯಗಳನ್ನು ನಿರ್ಮಿಸಲು ಅಥವಾ ನಿರ್ವಹಿಸಲು 18ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ಒಟ್ಟು ವಾರ್ಷಿಕ ಚಂದಾದ ಶೇಕಡ ಹತ್ತರಷ್ಟನ್ನು ಖರ್ಚು ಮಾಡತಕ್ಕದ್ದು; ಅಥವಾ

(ಇ) ಟ್ರಸ್ಟೀ ಸಮಿತಿಯು, ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಉದ್ದೇಶಕ್ಕಾಗಿ ನಿಧಿಯನ್ನು ಒದಗಿಸಬಹುದು; ಅಥವಾ

(ಎಫ್) ನಿಯಮಿಸಬಹುದಾದಂಥ ಇತರ ಪ್ರಯೋಜನಗಳನ್ನು ಒದಗಿಸಬಹುದು.

**25. ಟ್ರಸ್ಟೀ ಸಮಿತಿಯ ತೀರ್ಮಾನದ ಅಥವಾ ಆದೇಶದ ವಿರುದ್ಧ ಅಪೀಲು.–** (1) ಟ್ರಸ್ಟೀ ಸಮಿತಿಯ ಯಾವುದೇ ತೀರ್ಮಾನ ಅಥವಾ ಆದೇಶದ ವಿರುದ್ಧ ಅಪೀಲನ್ನು ರಾಜ್ಯ ಬಾರ್ ಕೌನ್ಸಿಲ್‌ಗೆ ಸಲ್ಲಿಸಲು ಅವಕಾಶವಿರತಕ್ಕದ್ದು.

(2) ಅಪೀಲು ನಿಯಮಿಸಲಾದ ನಮೂನೆಯಲ್ಲಿರತಕ್ಕದ್ದು ಮತ್ತು ಅದಕ್ಕೆ,–

(ಎ) ಯಾವ ತೀರ್ಮಾನದ ಅಥವಾ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ತೀರ್ಮಾನದ ಅಥವಾ ಆದೇಶದ ಒಂದು ಪ್ರತಿಯನ್ನು;

(ಬಿ) ಅನುಸೂಚಿತ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ರಾಜ್ಯ ಬಾರ್ ಕೌನ್ಸಿಲಿನ ಖಾತೆಗೆ ಇಪ್ಪತ್ತೈದು ರೂಪಾಯಿಗಳನ್ನು ಸಂದಾಯ ಮಾಡಿದ್ದರ ಸಾಕ್ಷ್ಯವಾಗಿ ರಸೀದಿಯನ್ನು

– ಲಗತ್ತಿಸತಕ್ಕದ್ದು.

(3) ಯಾವ ತೀರ್ಮಾನ ಅಥವಾ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಲಾಗಿದೆಯೋ ಆ ತೀರ್ಮಾನ ಅಥವಾ ಆದೇಶವು ತಲುಪಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಅಪೀಲನ್ನು ಸಲ್ಲಿಸತಕ್ಕದ್ದು.

(4) ಅಂಥ ಅಪೀಲಿನ ಮೇಲೆ ರಾಜ್ಯ ಬಾರ್ ಕೌನ್ಸಿಲಿನ ತೀರ್ಮಾನವು ಅಂತಿಮವಾಗಿರತಕ್ಕದ್ದು.

## ಅಧ್ಯಾಯ – VI

## ಸ್ಟಾಂಪುಗಳ ಮುದ್ರಣ, ಹಂಚಿಕೆ ಮತ್ತು ರದ್ದಿಯಾತಿ

**26. ರಾಜ್ಯ ಬಾರ್ ಕೌನ್ಸಿಲಿನಿಂದ ನ್ಯಾಯವಾದಿಗಳ ಕಲ್ಯಾಣ ನಿಧಿಯ ಸ್ಟಾಂಪುಗಳ ಮುದ್ರಣ ಮತ್ತು ವಿತರಣೆ.–**(1) ಸಮುಚಿತ ಸರ್ಕಾರವು, ರಾಜ್ಯ ಬಾರ್ ಕೌನ್ಸಿಲ್ ಈ ಬಗ್ಗೆ ಮಾಡಿದ ಕೋರಿಕೆಯ ಮೇರೆಗೆ, ನಿಯಮಿಸಬಹುದಾದಂತಹ ವಿನ್ಯಾಸದಲ್ಲಿ, "ನ್ಯಾಯವಾದಿಗಳ ಕಲ್ಯಾಣ ನಿಧಿ ಸ್ಟಾಂಪು" ಎಂದು ಅಂತರ್ಲೇಖಿತವಾದ ಐದು ರೂಪಾಯಿಗಳ ಮೌಲ್ಯದ ಅಥವಾ ನಿಯಮಿಸಬಹುದಾದಂತಹ ಇತರ ಮೌಲ್ಯದ ನ್ಯಾಯವಾದಿಗಳ ಕಲ್ಯಾಣ ನಿಧಿಯ ಸ್ಟಾಂಪುಗಳನ್ನು ಮುದ್ರಿಸುವಂತೆ ಮಾಡಲು ಮತ್ತು ವಿತರಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಪ್ರತಿಯೊಂದು ಸ್ಟಾಂಪಿನ ಅಳತೆ 2.54 ಸೆಂ.ಮೀ. ಉದ್ದ 5.08 ಸೆಂ.ಮೀ. ಅಗಲವಿರತಕ್ಕದ್ದು ಮತ್ತು ಅದನ್ನು ನ್ಯಾಯವಾದಿಗಳಿಗೆ ಮಾರಾಟ ಮಾಡತಕ್ಕದ್ದು.

(3) ಸ್ಟಾಂಪುಗಳ ಅಭಿರಕ್ಷೆಯು ರಾಜ್ಯ ಬಾರ್ ಕೌನ್ಸಿಲಿನದಾಗಿರತಕ್ಕದ್ದು.

(4) ರಾಜ್ಯ ಬಾರ್ ಅಸೋಸಿಯೇಷನ್‌ಗಳ ಮತ್ತು ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್ನುಗಳ ಮೂಲಕ ಸ್ಟಾಂಪುಗಳ ವಿತರಣೆ ಮತ್ತು ಮಾರಾಟವನ್ನು ರಾಜ್ಯ ಬಾರ್ ಕೌನ್ಸಿಲ್ ನಿಯಂತ್ರಿಸತಕ್ಕದ್ದು.

(5) ರಾಜ್ಯ ಬಾರ್ ಕೌನ್ಸಿಲ್, ರಾಜ್ಯ ಬಾರ್ ಅಸೋಸಿಯೇಷನ್‌ಗಳು ಮತ್ತು ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್‌ಗಳು ನಿಯಮಿಸಬಹುದಾದಂತಹ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸ್ಟಾಂಪುಗಳ ಸೂಕ್ತ ಲೆಕ್ಕಪತ್ರಗಳನ್ನು ಇಡತಕ್ಕದ್ದು.

(6) ರಾಜ್ಯ ಬಾರ್ ಕೌನ್ಸಿಲ್ ಮತ್ತು ರಾಜ್ಯ ನ್ಯಾಯವಾದಿಗಳ ಅಸೋಸಿಯೇಷನ್‌ಗಳು, ಸ್ಟಾಂಪುಗಳ ಮೌಲ್ಯದ ಶೇಕಡ ಹತ್ತರಷ್ಟನ್ನು ಆನುಷಂಗಿಕ ವೆಚ್ಚಗಳಿಗಾಗಿ ಕಳೆದು ಉಳಿದ ಮೌಲ್ಯವನ್ನು ಸಂದಾಯ ಮಾಡಿದ ನಂತರ ರಾಜ್ಯ ಬಾರ್ ಕೌನ್ಸಿಲಿನಿಂದ ಸ್ಟಾಂಪುಗಳನ್ನು ಖರೀದಿ ಮಾಡತಕ್ಕದ್ದು.

**27. ವಕಾಲತ್‌ನಾಮೆಗೆ ಸ್ಟಾಂಪುಗಳನ್ನು ಅಂಟಿಸುವುದು.–** (1) ಪ್ರತಿಯೊಬ್ಬ ನ್ಯಾಯವಾದಿಯು,–

(ಎ) ಜಿಲ್ಲಾ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದ ಅಧೀನ ನ್ಯಾಯಾಲಯದಲ್ಲಿ ತಾನು ದಾಖಲ್ಮಾಡುವ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಐದು ರೂಪಾಯಿಗಳ;

(ಬಿ) ನ್ಯಾಯಾಧಿಕರಣದಲ್ಲಿ ಅಥವಾ ಇತರ ಪ್ರಾಧಿಕಾರದಲ್ಲಿ ಅಥವಾ ಉಚ್ಚ ನ್ಯಾಯಾಲಯದಲ್ಲಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ತಾನು ದಾಖಲ್ಮಾಡುವ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಹತ್ತು ರೂಪಾಯಿಗಳ

– ಮೌಲ್ಯದ ಸ್ಟಾಂಪನ್ನು ಅಂಟಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಅಂಟಿಸಬೇಕಾದ ಸ್ಟಾಂಪುಗಳ ಮೌಲ್ಯವು ಇಪ್ಪತ್ತೈದು ರೂಪಾಯಿಗಳನ್ನು ಮೀರದ ಹಾಗೆ ಸಮುಚಿತ ಸರ್ಕಾರವು ನಿಯಮಿಸಬಹುದು:

ಮತ್ತೂ ಪರಂತು, ಜಿಲ್ಲಾ ನ್ಯಾಯಾಲಯದಲ್ಲಿ ಅಥವಾ ಜಿಲ್ಲಾ ನ್ಯಾಯಾಲಯದ ಅಧೀನ ನ್ಯಾಯಾಲಯದಲ್ಲಿ ಅಥವಾ ನ್ಯಾಯಾಧಿಕರಣದಲ್ಲಿ ಅಥವಾ ಇತರ ಪ್ರಾಧಿಕಾರದಲ್ಲಿ ಅಥವಾ ಉಚ್ಚ ನ್ಯಾಯಾಲಯದಲ್ಲಿ ಅಥವಾ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲ್ಮಾಡಲಾಗುವ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಅಂಟಿಸಲು ವಿವಿಧ ಮೌಲ್ಯದ ಸ್ಟಾಂಪುಗಳನ್ನು ಸಮುಚಿತ ಸರ್ಕಾರವು ನಿಯಮಿಸಬಹುದು.

(2) ಸ್ಟಾಂಪಿನ ಮೌಲ್ಯವು ಮೊಕದ್ದಮೆಯ ವೆಚ್ಚವಾಗಿರತಕ್ಕದ್ದಲ್ಲ ಅಥವಾ ಯಾವುದೇ ಸಂದರ್ಭದಲ್ಲಿ ಅದನ್ನು ಕಕ್ಷಿದಾರನಿಂದ ಸಂಗ್ರಹಿಸತಕ್ಕದ್ದಲ್ಲ.

(3) ಯಾವನೇ ನ್ಯಾಯವಾದಿಯು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ನಿಧಿಯ ಪ್ರಯೋಜನಗಳಿಗೆ ಪೂರ್ಣವಾಗಿ ಅಥವಾ ಭಾಗಶಃ ಅವನಿಗೆ ಹಕ್ಕಿಲ್ಲದಂತೆ ಮಾಡತಕ್ಕದ್ದು ಮತ್ತು ಟ್ರಸ್ಟೀ ಸಮಿತಿಯು, ಅಂತಹ ಉಲ್ಲಂಘನೆಯನ್ನು ಸೂಕ್ತ ಕ್ರಮಕ್ಕಾಗಿ ರಾಜ್ಯ ಬಾರ್ ಕೌನ್ಸಿಲಿಗೆ ವರದಿ ಮಾಡತಕ್ಕದ್ದು.

(4) ಜಿಲ್ಲಾ ನ್ಯಾಯಾಲಯ ಅಥವಾ ಜಿಲ್ಲಾ ನ್ಯಾಯಾಲಯದ ಅಧೀನ ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರ ಅಥವಾ ಉಚ್ಚ ನ್ಯಾಯಾಲಯ ಅಥವಾ ಸರ್ವೋಚ್ಚ ನ್ಯಾಯಾಲಯದ ಮುಂದೆ ದಾಖಲ್ಮಾಡಿದ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಅಂಟಿಸಿದ ಪ್ರತಿಯೊಂದು ಸ್ಟಾಂಪನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ರದ್ದುಗೊಳಿಸತಕ್ಕದ್ದು.

## ಅಧ್ಯಾಯ – VII

### ಸಂಕೀರ್ಣ

**28. ಕೆಲವು ವ್ಯಕ್ತಿಗಳು ಪ್ರಯೋಜನಗಳಿಗೆ ಅರ್ಹರಾಗಿರತಕ್ಕದ್ದಲ್ಲ.–** ಯಾವನೇ ಹಿರಿಯ ನ್ಯಾಯವಾದಿಯು ಅಥವಾ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ನಿವೃತ್ತಿ ವೇತನವನ್ನು ಪಡೆಯುವ ವ್ಯಕ್ತಿಯು 19ನೇ ಪ್ರಕರಣದ ಮೇರೆಗೆ ಅನುಗ್ರಹಪೂರ್ವಕ ಅನುದಾನಕ್ಕೆ ಅಥವಾ 21ನೇ ಪ್ರಕರಣದ ಮೇರೆಗೆ ವೃತ್ತಿಯು ಸಮಾಪ್ತಿಯಾದ ಮೇಲೆ ಮೊಬಲಗಿನ ಸಂದಾಯಕ್ಕೆ ಅಥವಾ 24ನೇ ಪ್ರಕರಣದ (ಎ) ಖಂಡದ ಅಥವಾ (ಬಿ) ಖಂಡದ ಅಥವಾ (ಸಿ) ಖಂಡದ ಮೇರೆಗಿನ ಯಾವುದೇ ಪ್ರಯೋಜನವನ್ನು ಪಡೆಯುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**29. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಮುಚಿತ ಸರ್ಕಾರದ ಅಥವಾ ಟ್ರಸ್ಟೀ ಸಮಿತಿಯ ಅಥವಾ ಟ್ರಸ್ಟೀ ಸಮಿತಿಯ ಅಧ್ಯಕ್ಷ ಅಥವಾ ಸದಸ್ಯ ಅಥವಾ ಕಾರ್ಯದರ್ಶಿಯ ಅಥವಾ ರಾಜ್ಯ ಬಾರ್ ಕೌನ್ಸಿಲಿನ ಅಥವಾ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**30. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಪ್ರತಿಷೇಧ.–** ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವ ಪ್ರಶ್ನೆ ಅಥವಾ ವಿಷಯವನ್ನು ಟ್ರಸ್ಟೀ ಸಮಿತಿಯು ಅಥವಾ ರಾಜ್ಯ ಬಾರ್ ಕೌನ್ಸಿಲ್ ಇತ್ಯರ್ಥಪಡಿಸಬೇಕೆಂದು, ತೀರ್ಮಾನಿಸಬೇಕೆಂದು ಅಥವಾ ವ್ಯವಹರಿಸಬೇಕೆಂದು ಅಥವಾ ನಿರ್ಧರಿಸಬೇಕೆಂದು ಅಗತ್ಯಪಡಿಸಲಾಗಿದೆಯೋ ಆ ಪ್ರಶ್ನೆ ಅಥವಾ ವಿಷಯವನ್ನು ಯಾವುದೇ ಸಿವಿಲ್ ನ್ಯಾಯಲಯವು ಇತ್ಯರ್ಥಪಡಿಸಲು, ತೀರ್ಮಾನಿಸಲು ಅಥವಾ ವ್ಯವಹರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

**31. ಸಾಕ್ಷಿದಾರರನ್ನು ಕರೆಸಲು ಮತ್ತು ಸಾಕ್ಷ್ಯವನ್ನು ತೆಗೆದುಕೊಳ್ಳಲು ಅಧಿಕಾರ.–** ಟ್ರಸ್ಟೀ ಸಮಿತಿ ಮತ್ತು ರಾಜ್ಯ ಬಾರ್ ಕೌನ್ಸಿಲ್, ಈ ಅಧಿನಿಯಮದ ಮೇರೆಗೆ ಯಾವುದೇ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ದಾವೆಯ ಅಧಿವಿಚಾರಣೆ ನಡೆಸುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹುವೇ ಅಧಿಕಾರಗಳನ್ನು ಟ್ರಸ್ಟೀ ಸಮಿತಿಯು ಮತ್ತು ರಾಜ್ಯ ಬಾರ್ ಕೌನ್ಸಿಲ್ ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯ ಹಾಜರಾತಿಗೆ ಒತ್ತಾಯಪಡಿಸುವುದು ಅಥವಾ ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಶೋಧನೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟಿನ ಮೇಲೆ ಸಾಕ್ಷ್ಯವನ್ನು ಪಡೆದುಕೊಳ್ಳುವುದು;

(ಡಿ) ಸಾಕ್ಷಿದಾರರ ವಿಚಾರಣೆಗಾಗಿ ಕಮೀಷನುಗಳನ್ನು ಹೊರಡಿಸುವುದು;

(ಇ) ನಿಯಮಿಸಬಹುದಾದ ಯಾವುದೇ ಇತರ ವಿಷಯ.

**32. ಅನುಸೂಚಿ-I ಮತ್ತು IIನ್ನು ತಿದ್ದುಪಡಿ ಮಾಡುವುದಕ್ಕೆ ಅಧಿಕಾರ.–** (1) ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಟ್ರಸ್ಟೀ ಸಮಿತಿಯ ಶಿಫಾರಸ್ಸಿನ ಮೇರೆಗೆ ಮತ್ತು ನಿಧಿಯಲ್ಲಿ ಲಭ್ಯವಿರುವ ಮೊಬಲಗನ್ನು ಗಮನದಲ್ಲಿಟ್ಟುಕೊಂಡು, ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದ ದರಗಳನ್ನು ತಿದ್ದುಪಡಿ ಮಾಡಬಹುದು.

(2) ಕೇಂದ್ರ ಸರ್ಕಾರವು, ಅಗತ್ಯವೆಂದು ಪರಿಗಣಿಸಿದಾಗ, ಅಧಿಸೂಚನೆಯ ಮೂಲಕ ಅನುಸೂಚಿ-IIನ್ನು ತಿದ್ದುಪಡಿ ಮಾಡಬಹುದು.

**33. ನಿರ್ದೇಶನಗಳನ್ನು ನೀಡಲು ಸಮುಚಿತ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಮೇಲೆ ಹೇಳಿದ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಟ್ರಸ್ಟೀ ಸಮಿತಿಯು, ಈ ಅಧಿನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, ವೃತ್ತಿಯ ಮತ್ತು ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದವುಗಳನ್ನು ಹೊರತುಪಡಿಸಿ, ನೀತಿ ಪ್ರಶ್ನೆಯ ಬಗ್ಗೆ ಸಮುಚಿತ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ ಟ್ರಸ್ಟೀ ಸಮಿತಿಯು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಅದಕ್ಕೆ ಒಂದು ಅವಕಾಶವನ್ನು ನೀಡತಕ್ಕದ್ದು.

(2) ನೀತಿಯ ಪ್ರಶ್ನೆಯಾಗಿರಲಿ ಅಥವಾ ಅಲ್ಲದಿರಲಿ, ಸಮುಚಿತ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**34. ಟ್ರಸ್ಟೀ ಸಮಿತಿಯನ್ನು ರದ್ದುಗೊಳಿಸಲು ಸಮುಚಿತ ಸರ್ಕಾರಕ್ಕೆ ಅಧಿಕಾರ.–**(1) ಸಮುಚಿತ ಸರ್ಕಾರವು, ಯಾವುದೇ ಕಾಲದಲ್ಲಿ,–

(ಎ) ಟ್ರಸ್ಟೀ ಸಮಿತಿಯ ನಿಯಂತ್ರಣಕ್ಕೆ ಮೀರಿದ ಸನ್ನಿವೇಶಗಳು ಉಂಟಾಗಿರುವ ಕಾರಣದಿಂದಾಗಿ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಕರ್ತವ್ಯಗಳನ್ನು ನೆರವೇರಿಸಲು ಅಸಮರ್ಥವಾಗಿದೆಯೆಂದು; ಅಥವಾ

(ಬಿ) ಟ್ರಸ್ಟೀ ಸಮಿತಿಯು ಈ ಅಧಿನಿಯಮದ ಮೇರೆಗೆ ಸಮುಚಿತ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಕರ್ತವ್ಯಗಳನ್ನು ನೆರವೇರಿಸಲು ಸತತವಾಗಿ ತಪ್ಪಿದೆಯೆಂದು; ಅಥವಾ

(ಸಿ) ಹಾಗೆ ಮಾಡುವುದು ಸಾರ್ವಜನಿಕ ಹಿತಾಸಕ್ತಿಯಿಂದ ಅವಶ್ಯವೆನ್ನಿಸುವ ಸನ್ನಿವೇಶಗಳು ಅಸ್ತಿತ್ವದಲ್ಲಿವೆಯೆಂದು

– ಅಭಿಪ್ರಾಯಪಟ್ಟರೆ, ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ನಿರ್ದಿಷ್ಟಪಡಿಸಬೇಕಾದ ಕಾರಣಗಳಿಗಾಗಿ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಆರು ತಿಂಗಳುಗಳಿಗೆ ಮೀರದಂತಹ ಅವಧಿಯವರೆಗೆ ಟ್ರಸ್ಟೀ ಸಮಿತಿಯನ್ನು ರದ್ದುಗೊಳಿಸಬಹುದು ಮತ್ತು ಅಧಿಕಾರ ವ್ಯಾಪ್ತಿ ಹೊಂದಿರುವ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೊಂದಿಗೆ ಸಮಾಲೋಚನೆ ನಡೆಸಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನೊಬ್ಬರನ್ನು ಟ್ರಸ್ಟೀ ಸಮಿತಿಯ ನಿಯಂತ್ರಕನಾಗಿರಲು ನೇಮಕ ಮಾಡಬಹುದು:

ಪರಂತು, ಯಾವುದೇ ಅಂತಹ ಅಧಿಸೂಚನೆಯನ್ನು ಹೊರಡಿಸುವ ಮೊದಲು, ಸಮುಚಿತ ಸರ್ಕಾರವು, ಟ್ರಸ್ಟೀ ಸಮಿತಿಗೆ ಪ್ರಸ್ತಾವಿತ ರದ್ದಿಯಾತಿಯ ವಿರುದ್ಧ ತನ್ನ ನಿವೇದನೆಯನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಟ್ರಸ್ಟೀ ಸಮಿತಿಯ ಅಂಥ ನಿವೇದನೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರಿಗಣಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಟ್ರಸ್ಟೀ ಸಮಿತಿಯನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ,–

(ಎ) ರದ್ದಿಯಾತಿಯ ದಿನಾಂಕದಿಂದ ಟ್ರಸ್ಟೀ ಸಮಿತಿಯ ಅಧ್ಯಕ್ಷನು, ಸದಸ್ಯರು ಮತ್ತು ಕಾರ್ಯದರ್ಶಿಯು ತಮ್ಮ ಅಂಥ ಸ್ಥಾನಗಳನ್ನು ಖಾಲಿ ಮಾಡತಕ್ಕದ್ದು;

(ಬಿ) (3)ನೇ ಉಪಪ್ರಕರಣದ ಮೇರೆಗೆ ಟ್ರಸ್ಟೀ ಸಮಿತಿಯು ಪುನರ್ ರಚಿತವಾಗುವವರೆಗೆ, ಟ್ರಸ್ಟೀ ಸಮಿತಿಯ ನಿಯಂತ್ರಕನು, ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಟ್ರಸ್ಟೀ ಸಮಿತಿಯ ಮೂಲಕ ಅಥವಾ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಆತನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) ಟ್ರಸ್ಟೀ ಸಮಿತಿಯ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತುಗಳು ಮತ್ತು ನಿಧಿಯು (3)ನೇ ಉಪಪ್ರಕರಣದ ಮೇರೆಗೆ ಟ್ರಸ್ಟೀ ಸಮಿತಿಯು ಪುನರ್ ರಚಿತವಾಗುವವರೆಗೆ, ಸಮುಚಿತ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯ ಮುಕ್ತಾಯದಂದು ಅಥವಾ ಅದಕ್ಕಿಂತ ಮುಂಚೆ, ಸಮುಚಿತ ಸರ್ಕಾರವು, ಟ್ರಸ್ಟೀ ಸಮಿತಿಗೆ ಅಧ್ಯಕ್ಷ, ಸದಸ್ಯರು ಮತ್ತು ಕಾರ್ಯದರ್ಶಿಯನ್ನು ಹೊಸದಾಗಿ ನೇಮಕ ಮಾಡಿಕೊಳ್ಳುವ ಮೂಲಕ ಅಂತಹ ಸಮಿತಿಯನ್ನು ಪುನರ್ ರಚಿಸತಕ್ಕದ್ದು ಮತ್ತು ಅಂತಹ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತನ್ನ ಸ್ಥಾನವನ್ನು ತೆರವುಗೊಳಿಸಿದಂಥ ಯಾವನೇ ವ್ಯಕ್ತಿಯನ್ನು ಮರುನೇಮಕಾತಿಗೆ ಅನರ್ಹನೆಂದು ಭಾವಿಸತಕ್ಕದ್ದಲ್ಲ.

(4) ಸಮುಚಿತ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯ ಪ್ರತಿಯನ್ನು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ಕ್ರಮದ ಬಗ್ಗೆ ಮತ್ತು ಅಂತಹ ಕ್ರಮವನ್ನು ಕೈಗೊಳ್ಳಲು ಕಾರಣವಾಗುವ ಸನ್ನಿವೇಶಗಳ ಬಗ್ಗೆ ಸಂಪೂರ್ಣ ವರದಿಯನ್ನು ಸಂದರ್ಭಾನುಸಾರ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ, ಅದರ ಪ್ರತಿಯೊಂದು ಸದನದ ಮುಂದೆ ಅಥವಾ ಅಂತಹ ವಿಧಾನಮಂಡಲವು ಒಂದೇ ಸದನವನ್ನು ಒಳಗೊಂಡಿದ್ದರೆ ಆ ಸದನದ ಮುಂದೆ, ಆದಷ್ಟು ಬೇಗನೆ, ಇಡುವಂತೆ ಮಾಡತಕ್ಕದ್ದು.

**35. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು ಸಮುಚಿತ ಸರ್ಕಾರವಾಗಿದ್ದು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು ಎಂದರೆ:–

(ಎ) 11ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಕಳುಹಿಸಬೇಕಾದ ನಿಯತಕಾಲಿಕ ಮತ್ತು ವಾರ್ಷಿಕ ವರದಿಗಳು;

(ಬಿ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಲೆಕ್ಕಪತ್ರಗಳ ವಾರ್ಷಿಕ ವಿವರಣ ಪಟ್ಟಿಯನ್ನು ಮತ್ತು ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ತಯಾರಿಸತಕ್ಕದ್ದೋ ಆ ನಮೂನೆ ಮತ್ತು ರೀತಿ;

(ಸಿ) 14ನೇ ಪ್ರಕರಣದ (ಜಿ) ಖಂಡದ ಮೇರೆಗೆ ಇಟ್ಟುಕೊಂಡು ಬರಬೇಕಾದ ನಮೂನೆಗಳು, ರಿಜಿಸ್ಟರುಗಳು ಮತ್ತು ಇತರ ದಾಖಲೆಗಳು;

(ಡಿ) 16ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಗಳ ಅಸೋಸಿಯೇಷನ್ನು ಮಾನ್ಯತೆಗಾಗಿ ರಾಜ್ಯ ಬಾರ್ ಕೌನ್ಸಿಲ್‌ಗೆ ಯಾವ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದೋ ಆ ನಮೂನೆ;

(ಇ) 16ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ಮಾನ್ಯತೆಯ ಪ್ರಮಾಣಪತ್ರವನ್ನು ಯಾವ ನಮೂನೆಯಲ್ಲಿ ನೀಡತಕ್ಕದ್ದೋ ಆ ನಮೂನೆ;

(ಎಫ್) 18ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಯು ನಿಧಿಯ ಸದಸ್ಯನಾಗಿ ಪ್ರವೇಶ ಪಡೆಯಲು ಯಾವ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದೋ ಆ ನಮೂನೆ;

(ಜಿ) 18ನೇ ಪ್ರಕರಣದ (12)ನೇ ಉಪಪ್ರಕರಣದ ಮೇರೆಗೆ ನಿಧಿಯ ಸದಸ್ಯನಿಗೆ ಸಂದಾಯ ಮಾಡಬೇಕಾದ ಮೊಬಲಗನ್ನು ಯಾವ ಸೂತ್ರಗಳಿಗನುಸಾರ ಕಡಿಮೆಮಾಡತಕ್ಕದ್ದೋ ಆ ಸೂತ್ರಗಳು;

(ಹೆಚ್) 24ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿಧಿಯ ಸದಸ್ಯರಿಗೆ ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕಾದ ರೀತಿ;

(ಐ) 24ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಒದಗಿಸಬೇಕಾದ ಇತರ ಪ್ರಯೋಜನಗಳು;

(ಜೆ) 25ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಪೀಲಿನ ನಮೂನೆ;

(ಕೆ) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಮುದ್ರಿಸಬೇಕಾದ ಮತ್ತು ವಿತರಿಸಬೇಕಾದ ಸ್ಟಾಂಪುಗಳ ಮೌಲ್ಯ ಮತ್ತು ವಿನ್ಯಾಸ;

(ಎಲ್) 26ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸ್ಟಾಂಪುಗಳ ಲೆಕ್ಕಪತ್ರಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇಡತಕ್ಕದ್ದೋ ಆ ನಮೂನೆ ಮತ್ತು ರೀತಿ;

(ಎಮ್) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೊದಲ ಪರಂತುಕದ ಮೇರೆಗೆ ನಿಯಮಿಸಬಹುದಾದಂತೆ ಇಪ್ಪತ್ತೈದು ರೂಪಾಯಿಗಳನ್ನು ಮೀರದ ಸ್ಟ್ಯಾಂಪುಗಳ ಮೌಲ್ಯ;

(ಎನ್) 27ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಅಂಟಿಸಬೇಕಾದ ಸ್ಟ್ಯಾಂಪುಗಳ ಮೌಲ್ಯ;

(ಓ) 27ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಸ್ಟ್ರಾಂಪುಗಳನ್ನು ರದ್ದುಪಡಿಸುವ ರೀತಿ;

(ಪಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**36. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.**–(1) ರಾಜ್ಯ ಸರ್ಕಾರವು, ಸಮುಚಿತ ಸರ್ಕಾರವಾಗಿದ್ದು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಮತ್ತು ಕೇಂದ್ರ ಸರ್ಕಾರವು ರಚಿಸಿದ ನಿಯಮಗಳು ಯಾವುವಾದರೂ ಇದ್ದರೆ, ಆ ನಿಯಮಗಳಿಗೆ ಅಸಂಗತವಾಗದಂತಹ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥಹ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 11ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಕಳುಹಿಸಬೇಕಾದ ನಿಯತಕಾಲಿಕ ಮತ್ತು ವಾರ್ಷಿಕ ವರದಿಗಳು;

(ಬಿ) 13ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಲೆಕ್ಕಪತ್ರಗಳ ವಾರ್ಷಿಕ ವಿವರಪಟ್ಟಿಯನ್ನು ಮತ್ತು ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ತಯಾರಿಸತಕ್ಕದ್ದೋ ಆ ನಮೂನೆ ಮತ್ತು ಆ ರೀತಿ;

(ಸಿ) 14ನೇ ಪ್ರಕರಣದ (ಜಿ) ಖಂಡದ ಮೇರೆಗೆ ಇಟ್ಟುಕೊಂಡು ಬರಬೇಕಾದ ನಮೂನೆಗಳು, ರಿಜಿಸ್ಟರುಗಳು ಮತ್ತು ಇತರ ದಾಖಲೆಗಳು;

(ಡಿ) 16ನೇ ಪ್ರಕರಣದ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಗಳ ಅಸೋಸಿಯೇಷನ್ ಮಾನ್ಯತೆ ಪಡೆಯಲು ರಾಜ್ಯ ಬಾರ್ ಕೌನ್ಸಿಲ್‌ಗೆ ಯಾವ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದೋ ಆ ನಮೂನೆ;

(ಇ) 16ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ರಾಜ್ಯ ಬಾರ್ ಕೌನ್ಸಿಲ್ ಯಾವ ನಮೂನೆಯಲ್ಲಿ ಮಾನ್ಯತಾ ಪ್ರಮಾಣಪತ್ರವನ್ನು ನೀಡತಕ್ಕದ್ದೋ ಆ ನಮೂನೆ;

(ಎಫ್) 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ (2)ನೇ ಉಪಪ್ರಕರಣದ ಮೇರೆಗೆ ನ್ಯಾಯವಾದಿಯು ನಿಧಿಯ ಸದಸ್ಯನಾಗಿ ಪ್ರವೇಶ ಪಡೆಯಲು ಯಾವ ನಮೂನೆಯಲ್ಲಿ ಅರ್ಜಿ ಸಲ್ಲಿಸತಕ್ಕದ್ದೋ ಆ ನಮೂನೆ;

(ಜಿ) 18ನೇ ಪ್ರಕರಣದ (12)ನೇ ಉಪಪ್ರಕರಣದ ಮೇರೆಗೆ ನಿಧಿಯ ಸದಸ್ಯನಿಗೆ ಸಂದಾಯಮಾಡಬೇಕಾದ ಮೊಬಲಗನ್ನು ಯಾವ ಸೂತ್ರಗಳಿಗನುಸಾರವಾಗಿ ಕಡಿಮೆ ಮಾಡತಕ್ಕದ್ದೋ ಆ ಸೂತ್ರಗಳು;

(ಹೆಚ್) 24ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿಧಿಯ ಸದಸ್ಯರಿಗೆ ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬೇಕಾದ ರೀತಿ;

(ಐ) 24ನೇ ಪ್ರಕರಣದ (ಎಫ್) ಖಂಡದ ಮೇರೆಗೆ ಒದಗಿಸಬೇಕಾದ ಇತರ ಪ್ರಯೋಜನಗಳು;

(ಜೆ) 25ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಪೀಲಿನ ನಮೂನೆ;

(ಕೆ) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ, ಮುದ್ರಿಸಬೇಕಾದ ಮತ್ತು ವಿತರಿಸಬೇಕಾದ ಸ್ಟ್ಯಾಂಪುಗಳ ಮೌಲ್ಯ ಮತ್ತು ವಿನ್ಯಾಸ;

(ಎಲ್) 26ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸ್ಟ್ಯಾಂಪುಗಳ ಲೆಕ್ಕಪತ್ರಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇಡತಕ್ಕದ್ದೋ ಆ ನಮೂನೆ ಮತ್ತು ಆ ರೀತಿ;

(ಎಂ) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೊದಲ ಪರಂತುಕದ ಮೇರೆಗೆ ನಿಯಮಿಸಬಹುದಾದಂತೆ ಇಪ್ಪತ್ತೈದು ರೂ.ಗಳನ್ನು ಮೀರದ ಸ್ಟ್ಯಾಂಪ್‌ಗಳ ಮೌಲ್ಯ;

(ಎನ್) 27ನೇ ಪ್ರಕರಣದ (1)ನೇ ಉಪಪ್ರಕರಣದ ಎರಡನೇ ಪರಂತುಕದ ಮೇರೆಗೆ ಪ್ರತಿಯೊಂದು ವಕಾಲತ್‌ನಾಮದ ಮೇಲೆ ಅಂಟಿಸಬೇಕಾದ ಸ್ಟ್ಯಾಂಪುಗಳ ಮೌಲ್ಯ;

(ಓ) 27ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಸ್ಟ್ಯಾಂಪುಗಳನ್ನು ರದ್ದುಪಡಿಸುವ ರೀತಿ;

(ಪಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

**37. ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಅಥವಾ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.–** (1) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಹಾಗೂ 32ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ

ಹೊರಡಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯನ್ನು ಮಾಡಕೂಡದೆಂದು ಅಥವಾ ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 32ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಎರಡು ಸದನಗಳನ್ನು ಒಳಗೊಂಡಿದ್ದರೆ, ಪ್ರತಿಯೊಂದು ಸದನದ ಮುಂದೆ, ಅಥವಾ ಅಂತಹ ವಿಧಾನಮಂಡಲವು ಒಂದು ಸದನವನ್ನು ಒಳಗೊಂಡಿದ್ದರೆ, ಆ ಸದನದ ಮುಂದೆ ಇಡತಕ್ಕದ್ದು.

**38. ಉಳಿಸುವಿಕೆ.–** IIನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿನಿಯಮಿತಿಗಳು ಯಾವ ರಾಜ್ಯಗಳಲ್ಲಿ ಅನ್ವಯವಾಗುತ್ತವೆಯೋ ಆ ರಾಜ್ಯಗಳಿಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**ಅನುಸೂಚಿ – I**

**(21(1) ಮತ್ತು 32(1)ನೇ ಪ್ರಕರಣಗಳನ್ನು ನೋಡಿ)**

| **ನಿಧಿಯ ಸದಸ್ಯನಾಗಿರುವ ವರ್ಷಗಳ ಸಂಖ್ಯೆ** | **ಸಂದಾಯ ಮಾಡಬೇಕಾದ ಮೊಬಲಗಿನ ಪ್ರಮಾಣ** |
|---|---|
| 30 | 30,000 ರೂ. |
| 29 | 29,000 ರೂ. |
| 28 | 28,000 ರೂ. |
| 27 | 27,000 ರೂ. |
| 26 | 26,000 ರೂ. |
| 25 | 25,000 ರೂ. |
| 24 | 24,000 ರೂ. |
| 23 | 23,000 ರೂ. |
| 22 | 22,000 ರೂ. |
| 21 | 21,000 ರೂ. |
| 20 | 20,000 ರೂ. |
| 19 | 19,000 ರೂ. |

| ನಿಧಿಯ ಸದಸ್ಯನಾಗಿರುವ ವರ್ಷಗಳ ಸಂಖ್ಯೆ | ಸಂದಾಯ ಮಾಡಬೇಕಾದ ಮೊಬಲಗಿನ ಪ್ರಮಾಣ |
|---|---|
| 18 | 18,000 ರೂ. |
| 17 | 17,000 ರೂ. |
| 16 | 16,000 ರೂ. |
| 15 | 15,000 ರೂ. |
| 14 | 14,000 ರೂ. |
| 13 | 13,000 ರೂ. |
| 12 | 12,000 ರೂ. |
| 11 | 11,000 ರೂ. |
| 10 | 10,000 ರೂ. |
| 9 | 9,000 ರೂ. |
| 8 | 8,000 ರೂ. |
| 7 | 7,000 ರೂ. |
| 6 | 6,000 ರೂ. |
| 5 | 5,000 ರೂ. |
| 4 | 4,000 ರೂ. |
| 3 | 3,000 ರೂ. |
| 2 | 2,000 ರೂ. |
| 1 | 1,000 ರೂ. |

## ಅನುಸೂಚಿ – II

**(32(2) ಮತ್ತು 38ನೇ ಪ್ರಕರಣಗಳನ್ನು ನೋಡಿ)**

1. ಉತ್ತರ ಪ್ರದೇಶ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1974 (1974ರ 6).
2. ಬಿಹಾರ ರಾಜ್ಯ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 (1983ರ 16).
3. ಮಧ್ಯಪ್ರದೇಶ ಅಧಿವಕ್ತಾ ಕಲ್ಯಾಣ ನಿಧಿ ಅಧಿನಿಯಮ, 1982 (1982ರ 9).
4. ಆಂಧ್ರಪ್ರದೇಶ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1987 (1987ರ 33).
5. ಓರಿಸ್ಸಾ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1987 (1987ರ 18).
6. ರಾಜಾಸ್ತಾನ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1987 (1987ರ 15).
7. ತಮಿಳುನಾಡು ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1987 (1987ರ 49).
8. ಗುಜರಾತ್ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1991 (1991ರ 14).

9. ಗೋವಾ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1995 (1997ರ 2).
10. ಅಸ್ಸಾಂ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1998 (1999ರ XVIII).
11. ಮಹಾರಾಷ್ಟ್ರ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1981 (1981ರ LXI).
12. ಹಿಮಾಚಲ ಪ್ರದೇಶ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1996 (1996ರ 14).
13. ಕೇರಳ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1980 (1980ರ 21).
14. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983 (1985ರ 2).
15. ಪಶ್ಚಿಮ ಬಂಗಾಳ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1991 (1991ರ XIII).
16. ಜಮ್ಮು ಮತ್ತು ಕಾಶ್ಮೀರ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1997 (1997ರ XXVI).

* * * * *